ಶ್ರೀದೇವೀ ಮಹಾತ್ಮೆ : ಯಕ್ಷಗಾನ ಪ್ರಸಂಗ ಮತ್ತು ಪ್ರಯೋಗ

ಪಿಹೆಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ
ಸಂಶೋಧನ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ಶ್ರೀದೇವಿ

MU/ACC/Ph.D/CR-66/2016-17/A3

ಮಾರ್ಗದರ್ಶಕರು

ಡಾ. ಧನಂಜಯ

ಸಹಾಯಕ ಪ್ರಾಧ್ಯಾಪಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

೨೦೨೫

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – ೫೭೪೧೯೯

ಶ್ರೀದೇವೀ ಮಹಾತ್ಮೆ: ಯಕ್ಷಗಾನ ಪ್ರಸಂಗ ಮತ್ತು ಪ್ರಯೋಗ

ಪುಟನೋಟ

ಪ್ರಸ್ತಾವನೆ

- **ಅಧ್ಯಯನದ ಉದ್ದೇಶ ಮತ್ತು ಮಹತ್ವ**
- **ಅಧ್ಯಯನದ ವ್ಯಾಪ್ತಿ ಮತ್ತು ವಿಧಾನಗಳು**
- **ಈವರೆಗಿನ ಅಧ್ಯಯನಗಳ ಸಮೀಕ್ಷೆ**
  - ಯಕ್ಷಗಾನ ಸಂಬಂಧಿ ಕೃತಿಗಳು ಹಾಗೂ ಬಿಡಿ ಲೇಖನಗಳು
  - ಯಕ್ಷಗಾನ ಕಲಾವಿದರ ಕುರಿತ ಅಭಿನಂದನಾ ಗ್ರಂಥಗಳು ಮತ್ತು ಜೀವನ ಚರಿತ್ರೆಗಳು
  - ಶ್ರೀದೇವೀ ಮಹಾತ್ಮೆ ಪ್ರಸಂಗಕ್ಕೆ ಆಕರವಾದ ಪುರಾಣ ಗ್ರಂಥಗಳು ಮತ್ತು ಶ್ರೀದೇವೀ ಮಹಾತ್ಮೆ ಕಾವ್ಯಗಳು
  - ಶ್ರೀದೇವೀ ಮಹಾತ್ಮೆ ಪ್ರಸಂಗ ಸಾಹಿತ್ಯ ಹಾಗೂ ಪ್ರದರ್ಶನದ ಕುರಿತ ಅಧ್ಯಯನ ಗ್ರಂಥಗಳು
  - ಪ್ರಸಂಗ ಸಾಹಿತ್ಯ ಮತ್ತು ಪ್ರದರ್ಶನದ ಕುರಿತ ಸಂಶೋಧನ ಮಹಾಪ್ರಬಂಧಗಳು
- **ಸಮೀಕ್ಷೆಯಿಂದ ತಿಳಿದುಕೊಂಡ ಗ್ರಹಿಕೆಗಳು**

ಅಧ್ಯಾಯ ಒಂದು : ಶ್ರೀದೇವೀ ಮಹಾತ್ಮೆ ಕಥನದ ಉಗಮ ಮತ್ತು ವಿಕಾಸ

೧.೧ ಸಂಸ್ಕೃತ ಸಾಹಿತ್ಯ

೧.೧.೧ ಮಾರ್ಕಂಡೇಯ ಪುರಾಣ

೧.೧.೨ ಶ್ರೀಮದ್ ದೇವೀಭಾಗವತ

೧.೧.೩ ಶಿವಪುರಾಣಂ

೧.೧.೪ ಶ್ರೀತ್ರಿಪುರಾರಹಸ್ಯ

೧.೧.೫ ಶ್ರೀ ಕಾಲಿಕಾಪುರಾಣಂ

೧.೧.೬ ಶ್ರೀಮನ್ಮಹಾಭಾರತ

೧.೧.೭ ಶ್ರೀ ಲಿಂಗಮಾಹಾಪುರಾಣಂ

೧.೧.೮ ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣಂ

೧.೧.೯ ಶ್ರೀ ಸ್ಕಾಂದಮಹಾಪುರಾಣಂ

೧.೧.೧೦ ಶ್ರೀ ಗಣೇಶ ಪುರಾಣಂ

೧.೧.೧೧ ಶ್ರೀ ಸೌರಪುರಾಣವು

೧.೧.೧೨ ಶ್ರೀ ವಾಮನಪುರಾಣಂ

೧.೧.೧೩ ಕೂರ್ಮ ಪುರಾಣಂ

೧.೧.೧೪ ಶ್ರೀ ಬ್ರಹ್ಮವೈವರ್ತಮಹಾಪುರಾಣಂ

೧.೧.೧೫ ನರಸಿಂಹ ಪುರಾಣಮ್

೧.೧.೧೬ ಶ್ರೀ ವರಾಹಪುರಾಣಂ

೧.೧.೧೭ ಭವಿಷ್ಯಮಹಾಪುರಾಣಂ

೧.೧.೧೮ ಶ್ರೀಮದ್ವಾಯುಮಹಾಪುರಾಣಂ

೧.೧.೧೯ ಶ್ರೀಮತ್ಸ್ಯಮಹಾಪುರಾಣಂ

೧.೧.೨೦ ನಾರದೀಯ ಮಹಾಪುರಾಣ

೧.೧.೨೧ ಪದ್ಮಮಹಾಪುರಾಣಂ

೧.೧.೨೨ ಇತರ ಪುರಾಣಗಳು

೧.೨ ಕನ್ನಡ ಸಾಹಿತ್ಯ

೧.೨.೧ ಚಿದಾನಂದಾವಧೂತ ವಿರಚಿತ ಶ್ರೀದೇವೀ ಮಹಾತ್ಮೆ

೧.೨.೨ ವಚನ ದೇವೀ ಮಹಾತ್ಮೆ

೧.೨.೩ ಮಾರ್ಕಾಂಡೇಯ ಪುರಾಣಾಂತರ್ಗತ ಶ್ರೀದೇವೀಮಹಾತ್ಮೆ (ಭಾಮಿನಿ ಷಟ್ಪದಿ)

೧.೨.೪ ಶ್ರೀ ದೇವೀ ಮಹಾತ್ಮೆ (ಭಾಮಿನಿ ಷಟ್ಪದಿ)

೧.೨.೫ ಕನ್ನಡ ದೇವೀ ಮಹಾತ್ಮೆ (ವಾರ್ಧಕ ಷಟ್ಪದಿ)

೧.೨.೬ ಪೊಳಲಿ ಶಾಸ್ತ್ರಿ ವಿರಚಿತ ಶ್ರೀ ದೇವೀ ಮಹಾತ್ಮ್ಯೆ

೧.೨.೭ ಶ್ರೀ ದೇವೀ ಮಹಾತ್ಮ್ಯೆಯ ದಿವ್ಯಕಥೆ

೧.೨.೮ ದೇವೀ ಮಹಾತ್ಮೆ

೧.೩ ತುಳು ಸಾಹಿತ್ಯ

೧.೩.೧ ತುಳು ದೇವೀಮಹಾತ್ಮೆ

೧.೩.೨ ದೇವಿನ ದಿವ್ಯ ಕತೆಕುಲು

೧.೩.೨ ತುಳುಭಾಷೆಡ್ ಶ್ರೀದೇವೀ ಮಹಾತ್ಮೆ

೧.೪ ಶ್ರೀದೇವೀ ಮಹಾತ್ಮೆ ಕಥಾ ವಿವೇಚನೆ

ಅಧ್ಯಾಯ ಎರಡು : ಯಕ್ಷಗಾನ ಪ್ರಸಂಗ ಪಠ್ಯವಾಗಿ 'ಶ್ರೀದೇವೀ ಮಹಾತ್ಮೆ'

೨.೧ ಪ್ರಸಂಗ ಪಠ್ಯದ ಸ್ವರೂಪ

೨.೨ ಕನ್ನಡ ಪ್ರಸಂಗಗಳು

೨.೩ ತುಳು ಪ್ರಸಂಗಗಳು

ಅಧ್ಯಾಯ ಮೂರು : ಶ್ರೀದೇವೀ ಮಹಾತ್ಮೆ ಪ್ರಸಂಗದ ವಸ್ತು ವಿನ್ಯಾಸ

೩.೧ ಶ್ರೀದೇವೀ ಮಹಾತ್ಮೆ ಪ್ರಸಂಗದ ನಡೆ

೩.೧.೧ ಕಥಾರಂಭ

೩.೨.೨ ತ್ರಿಮೂರ್ತಿಗಳ ಜನನ

೩.೧.೩ ಮಧು ಕೈಟಭರ ವಧೆ

೩.೧.೪ ಮಹಿಷಾಸುರ ಜನನ

೩.೧.೫ ಮಹಿಷಾಸುರ ವಧೆ

೩.೧.೬ ಶುಂಭ ನಿಶುಂಭರ ಪ್ರವೇಶ

೩.೧.೭ ಚಂಡ ಮುಂಡರು, ಸುಗ್ರೀವ

೩.೧.೮ ಧೂಮ್ರಾಕ್ಷ, ಚಂಡಮುಂಡರ ವಧೆ

೩.೧.೯ ರಕ್ತಬೀಜ, ಶುಂಭನಿಶುಂಭರ ವಧೆ

೩.೧.೧೦ ಕಥಾಂತ್ಯ

೩.೨ ಪುರಾಣ ಮತ್ತು ಪ್ರಸಂಗ ಪಠ್ಯ ತೌಲನಿಕ ವಿವೇಚನೆ

೩.೨.೧ ಪುರಾಣ ಕಥೆಯ ವಿಸ್ತರಣೆ

೩.೨.೨ ಪುರಾಣ ಕಥೆಯಲ್ಲಿನ ಬದಲಾವಣೆಗಳು

೩.೨.೩ ಪುರಾಣ ಕಥೆಗೆ ಹೊಸ ಕಥೆಗಳ ಸೇರ್ಪಡೆ

೩.೨.೪ ಪುರಾಣ ಹಾಗೂ ಪ್ರಸಂಗದ ಸಾಮ್ಯತೆ

೩.೨.೫ ಪುರಾಣ ಹಾಗೂ ಪ್ರಸಂಗ ಪಠ್ಯಗಳ ಒಟ್ಟು ವಿಶ್ಲೇಷಣೆ

೩.೩ ಶ್ರೀದೇವೀ ಮಹಾತ್ಮೆ ಪ್ರಸಂಗದ ಸಾಹಿತ್ತಿಕ ವಿಶ್ಲೇಷಣೆ

ಅಧ್ಯಾಯ ನಾಲ್ಕು : ಶ್ರೀದೇವೀ ಮಹಾತ್ಮೆ ಪ್ರದರ್ಶನ ವಿವೇಚನೆ

೪.೧ ಯಕ್ಷಗಾನ ಪ್ರದರ್ಶನ ಸ್ವರೂಪ

೪.೨ ಶ್ರೀದೇವೀ ಮಹಾತ್ಮೆ ಪಾತ್ರ ವಿವೇಚನೆ

೪.೩ ಶ್ರೀದೇವೀ ಮಹಾತ್ಮೆ ಪ್ರದರ್ಶನ ವಿಶ್ಲೇಷಣೆ

೪.೩.೧. ಪ್ರದರ್ಶನದ ಆರಂಭಿಕ ಹಂತ

೪.೩.೨ ಪ್ರದರ್ಶನ ವಿವೇಚನೆ

೪.೩.೨.೧ ಪ್ರಸಂಗ ಬೆಳೆದು ಬಂದ ಬಗೆ

೪.೩.೨.೨ ಕಾಲ ವೈವಿಧ್ಯ

೪.೩.೨.೩ ಕಟೀಲು ಮೇಳ

೪.೩.೩ ಪ್ರದರ್ಶನ ವೈಶಿಷ್ಟ್ಯಗಳು

೪.೩.೩.೧ ಪ್ರದರ್ಶನ ವಿಶೇಷತೆಗಳು ಮತ್ತು ಸಾಧ್ಯತೆಗಳು

೪.೩.೩.೨ ರಂಗಸಜ್ಜಿಕೆ

೪.೩.೩.೩ ಶ್ರೀದೇವೀ ಮಹಾತ್ಮೆ ಪ್ರಸಂಗ – ಪ್ರದರ್ಶನಗಳ ಅಧ್ಯಯನ ಶಿಬಿರ

೪.೩.೩.೪ ವಿವಿಧ ಪ್ರಕಾರಗಳಲ್ಲಿ ಶ್ರೀದೇವೀ ಮಹಾತ್ಮೆ

೪.೪ ಆಚರಣೆಗಳು ಮತ್ತು ನಂಬಿಕೆಗಳು

ಸಮಾರೋಪ

ಅಧ್ಯಯನದ ಫಲಿತಗಳು

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಲೇಖನಗಳು

ವೀಡಿಯೋ

ವಕ್ತೃಗಳು

ಚಿತ್ರಕೃಪೆ

ಛಾಯಾಚಿತ್ರಗಳು

ಶ್ರೀದೇವೀ ಮಹಾತ್ಮೆ: ಯಕ್ಷಗಾನ ಪ್ರಸಂಗ ಮತ್ತು ಪ್ರಯೋಗ

ಪ್ರಸ್ತಾವನೆ

ಭಾರತದಲ್ಲಿ ರೂಢಮೂಲವಾದ ಸಾವಿರಾರು ಕಲೆಗಳಲ್ಲಿ ಯಕ್ಷಗಾನವು ಆಂಗಿಕ, ವಾಚಿಕ, ಆಹಾರ್ಯ ಈ ಮೂರನ್ನೂ ಕೂಡಾ ತನ್ನೊಳಗೂಡಿಸಿಕೊಂಡ ಅಪೂರ್ವವಾದ ಕಲೆ. ಕನ್ನಡ ನಾಡಿನ ಜನಪ್ರಿಯವೂ, ಅಪೂರ್ವವೂ ಆದ ವಿಶಿಷ್ಟ ಕಲೆ. ಮುಖ್ಯವಾಗಿ ಕರಾವಳಿಯ ಹೆಮ್ಮೆಯ ಕಲೆಯಾದ ಯಕ್ಷಗಾನವು ವೈಶಿಷ್ಟ್ಯಪೂರ್ಣ ರಂಗಸ್ಥಳ, ಚೌಕಿ ಮತ್ತು ವೈವಿಧ್ಯಪೂರ್ಣ ಕುಣಿತ, ವೇಷಭೂಷಣ, ರಂಗಪ್ರಕ್ರಿಯೆಗಳಿಂದಾಗಿ ಅನನ್ಯ ಕಲೆಯಾಗಿ ಗುರುತಿಸಿಕೊಂಡಿದೆ. ಸಾಂಸ್ಕೃತಿಕ ಹಾಗೂ ಸಾಹಿತ್ತಿಕವಾಗಿ ಅಪಾರ ಸಂಪತ್ತನ್ನು ಹೊಂದಿರುವಂತಹ ಕಲೆಯಿದು. ಧರ್ಮ ಈ ಕಲೆಯ ಪೋಷಕ ಶಕ್ತಿಯಾಗಿ ಹಿಂದಿನಿಂದಲೂ ಇದ್ದುದರಿಂದ ಕರಾವಳಿಯ ಆರಾಧನಾ ಭಾಗವಾಗಿಯೂ ಯಕ್ಷಗಾನವು ಬೆಳೆದು ಬಂದಿರುವುದನ್ನು ಗಮನಿಸಬಹುದಾಗಿದೆ.

ಯಕ್ಷಗಾನದ ಪ್ರಮುಖ ಜೀವಾಳ ಪ್ರಸಂಗ ಸಾಹಿತ್ಯ. ಪ್ರಸಂಗ ಸಾಹಿತ್ಯವು ಯಕ್ಷಗಾನ ಪ್ರದರ್ಶನದ ಏಕೈಕ ಲಿಖಿತ ಯಾ ಮೌಖಿಕ ಪಠ್ಯವಾಗಿದ್ದು ಪ್ರದರ್ಶನಕ್ಕೆ ಬೇಕಾದ ಕತೆಯನ್ನೊಳಗೊಂಡ ರಾಗ, ತಾಳ ಮತ್ತು ಛಂದೋಬದ್ಧವಾದ ಒಂದು ಸಾಹಿತ್ಯ ಪ್ರಕಾರ. 'ಪ್ರಸಂಗ' ಎಂಬುದು ರೂಢಿಯಲ್ಲಿ ಘಟನೆ, ಸನ್ನಿವೇಶ ಮುಂತಾದ ಅರ್ಥವನ್ನು ಒಳಗೊಂಡ ಪದ. ಯಕ್ಷಗಾನ ಪ್ರಸಂಗವು, ಯಕ್ಷಗಾನ ಪ್ರದರ್ಶನದ ಕಥಾವಸ್ತುವನ್ನು ಒಳಗೊಂಡ ಮೂಲ ಪಠ್ಯ. ಪ್ರಸಂಗ ಸಾಹಿತ್ಯವು ಮೌಖಿಕ ಮತ್ತು ಲಿಖಿತ ಪರಂಪರೆಯಲ್ಲಿದೆ. ಲಿಖಿತವಾಗಿ ಪ್ರಸಂಗ ರಚನೆಗೆ ತೊಡಗಿಕೊಳ್ಳುವ ಮೊದಲು, ಯಕ್ಷಗಾನ ಭಾಗವತರು ಸ್ವತಃ ರಂಗದಲ್ಲೇ ಪ್ರಸಂಗ ಪದ್ಯಗಳನ್ನು ರಚಿಸಿ, ಪ್ರದರ್ಶನವನ್ನು ಮುನ್ನಡೆಸಿದರು. ಭಾಗವತರ ಈ ಆಶುಕವಿತ್ವವು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಪ್ರಸಂಗ ಪಠ್ಯದಲ್ಲಿ ಪ್ರದರ್ಶನಕ್ಕೆ ಬೇಕಾಗುವ ಸಾಹಿತ್ಯಗಳು ಇಲ್ಲದೇ ಇರುವ ಸಂದರ್ಭದಲ್ಲಿ ರಂಗದಲ್ಲೇ ಪ್ರತ್ಯುತ್ಪನ್ನಮತಿತ್ವದೊಂದಿಗೆ ತಕ್ಷಣ ಸಾಹಿತ್ಯ ರಚನೆ ಮಾಡಿ ಹಾಡಬೇಕಾದ ಸಂದರ್ಭ ಅದೆಷ್ಟೋ ಬಾರಿ ಒದಗುತ್ತವೆ. ನಂತರ ಹಸ್ತಪ್ರತಿ, ತಾಡವೋಲೆಗಳಲ್ಲಿ ಬಂದ ಪ್ರಸಂಗ ಪ್ರತಿಗಳು ಈಗ ಮುದ್ರಣ ರೂಪಕ್ಕೆ ಬಂದು ಎಲ್ಲರಿಗೂ ಲಭ್ಯವಾಗುತ್ತಿವೆ.

ಯಕ್ಷಗಾನ ಕವಿಗಳು ಒಂದಿಲ್ಲೊಂದು ರೀತಿಯಿಂದ ಪುರಾಣಗ್ರಂಥಗಳು ಹಾಗೂ ಕಾವ್ಯಗಳನ್ನು ಆಧರಿಸಿ ಪ್ರಸಂಗಗಳನ್ನು ರಚಿಸಿದರು. ಪ್ರದರ್ಶನದ ಪಠ್ಯವೇ ಕಥೆಯ ನಡೆಗೆ

ಆಧಾರ. ಪ್ರಸಂಗ ಸಾಹಿತ್ಯವು ಆಯಾ ರಸ–ಭಾವಕ್ಕೆ ಅನುಗುಣವಾದ ಸಂಗೀತ, ನಾಟ್ಯ, ಶಬ್ದ ಹಾಗೂ ವಾಕ್ಯಕ್ಕೆ ಅನುವು ಮಾಡಿಕೊಟ್ಟಾಗ ಮಾತ್ರವೇ ಸಹೃದಯರನ್ನು ತಲುಪುವುದು ಸಾಧ್ಯ.

ಡಾ. ಜಿ. ಎಸ್. ಭಟ್ಟರು ಕೆರೆಮನೆ ಶಂಭು ಹೆಗಡೆಯವರ ಕುರಿತಾದ ಸಂಪ್ರಬಂಧದಲ್ಲಿ "ಪ್ರಸಿದ್ಧ ಪುರಾಣಗಳ ಯಾವುದಾದರೊಂದು ಸಂದರ್ಭವನ್ನೊಳಗೊಂಡ ಕಥಾನಕವುಳ್ಳ, ಯಕ್ಷಗಾನದ್ದೇ ಆದ ರಾಗ, ತಾಳಗಳ ಛಂದೋರೂಪದಲ್ಲಿ ನಿರೂಪಣೆಗೊಂಡ, ಸುಮಾರಾಗಿ ಒಂದು ರಾತ್ರಿಯ ಅವಧಿಯಲ್ಲಿ ಆಡಿ ಮುಗಿಸಬಲ್ಲ ರಂಗಗುಣದ ಸಾಧ್ಯತೆಯುಳ್ಳ ಭಾಷಾ ಮಾಧ್ಯಮದ ಕೃತಿ" (ತಾಳಮದ್ದಲೆ, ಪು.ಸಂ.೮) ಎಂದು ಪ್ರಸಂಗವನ್ನು ವ್ಯಾಖ್ಯಾನಿಸಿದ್ದಾರೆ.

ಪೌರಾಣಿಕ ಪ್ರಸಂಗಗಳು, ಐತಿಹಾಸಿಕ ಪ್ರಸಂಗಗಳು, ಜಾನಪದೀಯ ಪ್ರಸಂಗಗಳು, ಕಾಲ್ಪನಿಕ ಪ್ರಸಂಗಗಳು, ಸಾಂದರ್ಭಿಕ ಪ್ರಸಂಗಗಳು ಎಂದು ವಸ್ತುವಿಗನುಗುಣವಾಗಿ ಪ್ರಸಂಗ ಸಾಹಿತ್ಯವನ್ನು ವಿವಿಧ ರೀತಿಯಲ್ಲಿ ಗುರುತಿಸಿಕೊಳ್ಳಬಹುದು. ಪಾರ್ತಿಸುಬ್ಬ, ದೇವೀದಾಸ, ಮುದ್ದಣ, ಹಟ್ಟಿಯಂಗಡಿ ರಾಮಭಟ್ಟ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಕೀರಿಕ್ಕಾಡು ವಿಷ್ಣು ಮಾಸ್ತರ್, ಅಮೃತ ಸೋಮೇಶ್ವರ, ಅಗರಿ ಶ್ರೀನಿವಾಸ ಭಾಗವತರು, ಹಿರಿಯ ಬಲಿಪ ನಾರಾಯಣ ಭಾಗವತರು, ಕಿರಿಯ ಬಲಿಪ ನಾರಾಯಣ ಭಾಗವತರು, ಹೊಸ್ತೋಟ ಮಂಜುನಾಥ ಭಾಗವತರು, ಗೇರುಸೊಪ್ಪೆ ಶಾಂತಪ್ಪಯ್ಯ, ಸೀತಾನದಿ ಗಣಪಯ್ಯ ಶೆಟ್ಟಿ, ರಾಘವ ನಂಬಿಯಾರ್, ಶ್ರೀಧರ ಡಿ.ಎಸ್., ಅನಂತರಾಮ ಬಂಗಾಡಿ, ಗಣೇಶ್ ಕೊಲೆಕಾಡಿ ಮೊದಲಾದ ಹಲವರು ಮೌಲಿಕವಾದ ಯಕ್ಷಗಾನ ಪ್ರಸಂಗ ರಚನೆಗಳನ್ನು ಮಾಡಿದ್ದಾರೆ. ಪ್ರಸಂಗ ಪದ್ಯಗಳು ಛಂದೋಬದ್ಧವಾಗಿದ್ದು, ಸರಳವಾಗಿ ರಸಾಭಿವ್ಯಕ್ತಿಗೆ ಅನುಕೂಲವಾಗುವಂತೆ ಇರಬೇಕು. ಇಂತಹ ಪ್ರಸಂಗ ಪದ್ಯಗಳನ್ನು ನಿರ್ದಿಷ್ಟ ಕ್ರಮದಲ್ಲಿ ಹಾಡುವುದಕ್ಕೆ ಯಕ್ಷಗಾನದ ಪರಿಭಾಷೆಯಲ್ಲಿ ಮಟ್ಟು ಎನ್ನಲಾಗುತ್ತದೆ.

ಪ್ರಸಂಗ ಸಾಹಿತ್ಯದ ಫಲಿತವೇ ಪ್ರದರ್ಶನ. ಆಯಬದ್ಧವಾದ ರಂಗಸ್ಥಳದಲ್ಲಿ ಪ್ರಸಂಗ ಸಾಹಿತ್ಯದ ನಡೆ, ಪದ್ಯಗಳನ್ನು ಅರಿತುಕೊಂಡು ನೀಡುವುದೇ ಪ್ರದರ್ಶನ. ರಂಗಪಠ್ಯದ ಕಥಾ ಚೌಕಟ್ಟನ್ನು ಮೀರಿದರೆ ಅದು ಉತ್ತಮ ಪ್ರದರ್ಶನ ಎನಿಸಿಕೊಳ್ಳಲಾರದು. ಯಕ್ಷಗಾನದ ಹಿಮ್ಮೇಳ ಒಳಗೊಳ್ಳುವ ಭಾಗವತಿಕೆ, ಮದ್ದಳೆ, ಚೆಂಡೆ, ಚಕ್ರತಾಳ ಹಾಗೂ ಮುಮ್ಮೇಳ ಒಳಗೊಳ್ಳುವ ಪಾತ್ರಧಾರಿಗಳು, ಪಾತ್ರಧಾರಿಗಳು ಬರೆಯುವಂತಹ ಮುಖವರ್ಣಿಕೆ, ಧರಿಸುವಂತಹ ವೇಷಭೂಷಣ, ಪ್ರಸ್ತುತ ಪಡಿಸುವ ನಾಟ್ಯ, ಅಭಿನಯ, ಅರ್ಥಗಾರಿಕೆ ಇವುಗಳೆಲ್ಲವೂ ಸೇರಿ ಅಲೌಕಿಕವಾದ ಒಂದು ಲೋಕವನ್ನು ಯಕ್ಷಗಾನ ಪ್ರದರ್ಶನ ಸಹೃದಯರ ಮುಂದೆ

ಅನಾವರಣಗೊಳಿಸುತ್ತದೆ. ಕೇವಲ ಸಾಹಿತ್ಯವನ್ನು ಮಾತ್ರವೇ ಓದಿ ಅರ್ಥೈಸಿಕೊಳ್ಳುವುದರ ಬದಲಾಗಿ ಸಾಹಿತ್ಯವು ಪ್ರದರ್ಶನಗೊಂಡು ಅದನ್ನು ಕೇಳಿ, ನೋಡಿ ಆಸ್ವಾದಿಸಿದಾಗ ಆಗುವ ಪರಿಣಾಮ ಹೆಚ್ಚಿನದ್ದಾಗಿರುತ್ತದೆ. ಪ್ರದರ್ಶನವು ಪ್ರಸಂಗ ಸಾಹಿತ್ಯ ಒಳಗೊಂಡ ಕಥಾ ವಸ್ತುವನ್ನು ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುತ್ತದೆ. ಪಾತ್ರಧಾರಿಗಳು ಆಯಾ ಪಾತ್ರದ ಗೌರವವನ್ನು ಉಳಿಸಿಕೊಂಡು ಪ್ರದರ್ಶನವನ್ನು ನೀಡಿದಾಗ ಮಾತ್ರವೇ ಪಾತ್ರಚಿತ್ರಣವು ಪರಿಣಾಮಕಾರಿಯಾಗಿರುತ್ತದೆ.

ಶ್ರೀದೇವೀ ಮಹಾತ್ಮೆ ಪ್ರಸಂಗವು ಕರಾವಳಿ ಭಾಗಕ್ಕೆ ಮಾತ್ರ ಸೀಮಿತವಾಗದೆ ದೇಶ–ವಿದೇಶಗಳಲ್ಲೂ ತನ್ನ ವ್ಯಾಪಕತೆಯನ್ನು ಪಸರಿಸಿದ್ದು, ಬೇರೆ ಬೇರೆ ಭಾಷೆಗಳಲ್ಲಿ ಪ್ರದರ್ಶನಗೊಳ್ಳುವ ಮೂಲಕ ಪ್ರೇಕ್ಷಕವರ್ಗಕ್ಕೆ ತನ್ನ ಮಹತ್ವವನ್ನು ತಲುಪಿಸುವ ಉದ್ದೇಶವನ್ನು ಈಡೇರಿಸುತ್ತಿದೆ. ದೇವಿಯ ಲೀಲಾವಿಲಾಸಗಳನ್ನು ಹೇಳುವಂತಹ ಬಪ್ಪನಾಡು ಕ್ಷೇತ್ರ ಮಹಾತ್ಮೆ, ಕಟೀಲು ಕ್ಷೇತ್ರ ಮಹಾತ್ಮೆ, ಏಕಾದಶೀ ದೇವಿ ಮಹಾತ್ಮೆ, ಶ್ರೀ ಮಹಾದೇವೀ ಲಲಿತೋಪಖ್ಯಾನ, ಕೊಲ್ಲೂರು ಕ್ಷೇತ್ರ ಮಹಾತ್ಮೆ, ಗಾಯತ್ರೀ ಮಹಾತ್ಮೆ, ಶ್ರೀ ಭಗವತಿ ಮಹಾತ್ಮೆ, ಶ್ರೀದೇವಿ ಶಾಕಂಬರಿ, ಗಾಯತ್ರೀ ದೇವೀ ಮಹಾತ್ಮ್ಯೆ ಮುಂತಾದ ಇತರ ಯಕ್ಷಗಾನ ಪ್ರಸಂಗಗಳೂ ಜನಮನ್ನಣೆ ಗಳಿಸಿ ಪ್ರದರ್ಶನಗೊಳ್ಳುತ್ತಿವೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಯಕ್ಷಗಾನ ಆಟಗಳನ್ನು ತೆರೆದ ಬಯಲುಗಳಲ್ಲಿ ಆಡುವುದು ವಾಡಿಕೆ. ಹೆಚ್ಚಿನ ವೃತ್ತಿಪರ ಮೇಳಗಳು ಪ್ರಸಿದ್ಧ ದೇವಾಲಯಗಳ ಹೆಸರಿನಲ್ಲಿ ನಡೆಯುತ್ತಿವೆ. ಅವುಗಳನ್ನು ದಶಾವತಾರ ಆಟ, ಭಾಗವತರ ಆಟವೆಂದೂ ಕರೆಯಲಾಗುತ್ತಿತ್ತು. ಪೂರ್ವದಲ್ಲಿ ವಿಷ್ಣುವಿನ ಹತ್ತು ಅವತಾರಗಳಿಗೆ ಸಂಬಂಧಿಸಿದ ಕಥಾನಕಗಳನ್ನೇ ಆಡುತ್ತಿದ್ದರು. ಯಕ್ಷಗಾನದಲ್ಲಿ ರಾಮಾಯಣ, ಮಹಾಭಾರತ ಹಾಗೂ ಭಾಗವತ ಪ್ರಸಂಗಗಳೇ ಹೆಚ್ಚಾಗಿ ಕಂಡುಬರುತ್ತವೆ. ಯಕ್ಷಗಾನದ ಇತಿಹಾಸವನ್ನು ಒಟ್ಟಾಗಿ ಅವಲೋಕಿಸಿದಾಗ ವೈಷ್ಣವ ಹಾಗೂ ಶೈವ ಕಥೆಗಳೇ ವಿಜೃಂಭಿಸುತ್ತಿವೆ. ಇಂತಹ ಪರಂಪರೆಯ ನಡುವೆ ಶ್ರೀದೇವೀ ಮಹಾತ್ಮೆಯ ಮೂಲಕ ಯಕ್ಷಗಾನದಲ್ಲಿ ಶಾಕ್ತ್ಯ ಪರಂಪರೆಗೂ ಅವಕಾಶ ಸಿಕ್ಕಿತು.

ಶಾಕ್ತ್ಯ ಪರಂಪರೆಯ ಔನ್ನತ್ಯವನ್ನು ಎತ್ತಿ ಹಿಡಿಯುವಲ್ಲಿ ವಿಭಿನ್ನವೂ, ವಿಶಿಷ್ಟವೂ ಆದ ಪ್ರಮುಖ ಯಕ್ಷಗಾನ ಪ್ರಸಂಗವಾಗಿ ಕಾಣಸಿಗುವುದು ಶ್ರೀದೇವೀ ಮಹಾತ್ಮೆ. ಅತ್ಯಂತ ಪುರಾತನ

ಪುರಾಣ ಗ್ರಂಥಗಳಾದ ಮಾರ್ಕಂಡೇಯ ಪುರಾಣದ ದೇವೀ ಮಹಾತ್ಮ್ಯೆ(ಸಪ್ತಶತಿ) ಕಥೆ ಮತ್ತು ಶ್ರೀಮದ್ ದೇವೀಭಾಗವತದ ಕಥೆಯನ್ನು ಆಧರಿಸಿ ಯಕ್ಷಗಾನ ಕವಿಗಳು ಶ್ರೀದೇವೀ ಮಹಾತ್ಮೆ ಪ್ರಸಂಗವನ್ನು ರಚಿಸಿದ್ದಾರೆ. ಶಕ್ತಿ ಆರಾಧನೆಗೆ ಸಂಬಂಧಿಸಿದ ಶ್ರೀದೇವೀ ಮಹಾತ್ಮೆ ಕಥೆಯು ಪ್ರತ್ಯೇಕವಾಗಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದೆ. ಇವೆರಡು ಪುರಾಣಗಳು ಮಾತ್ರವಲ್ಲದೆ ಇನ್ನೂ ಹಲವು ಪುರಾಣಗಳು ಮತ್ತು ಪದ್ಯ-ಗದ್ಯ ರೂಪದಲ್ಲಿರುವ ಕಾವ್ಯಗಳು ಶ್ರೀದೇವೀ ಮಹಾತ್ಮೆ ಕಥೆಯನ್ನು ಒಳಗೊಂಡಿದೆ.

ದುಷ್ಟಶಿಕ್ಷಕಳೂ, ಶಿಷ್ಟರಕ್ಷಕಳೂ ಆದ ಶಕ್ತಿ ಆರಾಧನೆಯ ಕೇಂದ್ರವಾದ ಶ್ರೀದೇವಿಯ ಮಹಿಮೆಯನ್ನು ಕೊಂಡಾಡುವಂತಹ ಪ್ರಸಂಗವೇ ಶ್ರೀದೇವೀ ಮಹಾತ್ಮೆ. ಶಾಕ್ತಪರಂಪರೆಯ ಔನ್ನತ್ಯವನ್ನು ಈ ಪ್ರಸಂಗವು ಎತ್ತಿಹಿಡಿಯುತ್ತದೆ. ಸುಮಾರು ಒಂಬತ್ತು ದಶಕಗಳಿಂದ ಪ್ರದರ್ಶಿತಗೊಳ್ಳುತ್ತಿರುವ ಈ ಪ್ರಸಂಗವು ವರ್ಷದಲ್ಲೇ ಅತೀ ಹೆಚ್ಚು ಪ್ರದರ್ಶನಗೊಳ್ಳುವಂತಹ ಪುರಾಣ ಪ್ರಸಂಗ. ಪ್ರಸ್ತುತ ತೆಂಕುತಿಟ್ಟು ಹಾಗೂ ಬಡಗುತಿಟ್ಟಿನಲ್ಲಿ ಸುಮಾರು ನಲುವತ್ತು ವೃತ್ತಿಪರ ಮೇಳಗಳಿವೆ. ಪ್ರಮುಖವಾಗಿ, ಆರು ಶಾಖೆಗಳನ್ನು ಹೊಂದಿರುವ ತೆಂಕಿನ ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಒಂದು ತಿರುಗಾಟದಲ್ಲಿ ಸುಮಾರು ೬೦೦ ಹಾಗೂ ಬಡಗಿನಲ್ಲಿ ಐದು ಶಾಖೆಗಳನ್ನು ಹೊಂದಿರುವ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ, ಮಂದರ್ತಿ ಮೇಳದಲ್ಲಿ ಒಂದು ತಿರುಗಾಟದಲ್ಲಿ ಸುಮಾರು ೩೫೦ ಶ್ರೀದೇವೀ ಮಹಾತ್ಮೆ ಪ್ರಸಂಗದ ಹರಕೆ ಬಯಲಾಟಗಳು ನಡೆಯುತ್ತವೆ. ಕೇವಲ ಇವೆರಡೇ ಮೇಳಗಳಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಪ್ರದರ್ಶಿತಗೊಳ್ಳುತ್ತಿರುವ ಈ ಪ್ರಸಂಗವು ವೃತ್ತಿಪರ ಹಾಗೂ ಹವ್ಯಾಸಿ ಮೇಳಗಳೆಲ್ಲವೂ ಸೇರಿ ಸುಮಾರು ೧,೫೦೦ಕ್ಕೂ ಮಿಗಿಲಾದ ಪ್ರದರ್ಶನವನ್ನು ಪ್ರತೀ ವರ್ಷ ಕಾಣುತ್ತಿದೆ. ವೃತ್ತಿಪರ ಮೇಳಗಳಷ್ಟೇ ಕೊಡುಗೆಯನ್ನು ಈ ಪ್ರಸಂಗಕ್ಕೆ ಹವ್ಯಾಸಿ ಮೇಳಗಳು, ಮಕ್ಕಳ ಮೇಳಗಳು ನೀಡುತ್ತಾ ಬಂದಿವೆ. ಜಾಗತಿಕ ರಂಗಭೂಮಿಯಲ್ಲಿಯೇ ಇಷ್ಟು ವರ್ಷಗಳಿಂದ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶಿಸಿದ ಮತ್ತು ಅತ್ಯಧಿಕ ಜನರು ನೋಡಿರುವ ಏಕೈಕ ಪ್ರಸಂಗ ಎಂಬ ದಾಖಲೆ ಶ್ರೀದೇವೀ ಮಹಾತ್ಮೆ ಪ್ರಸಂಗಕ್ಕೆ ಸಲ್ಲುತ್ತದೆ.

ಯಕ್ಷಗಾನದ ಪ್ರಸಿದ್ಧ ಭಾಗವತರಾದ ಕಿರಿಯ ಬಲಿಪ ನಾರಾಯಣ ಭಾಗವತರು ನೀಡಿದ ಮಾಹಿತಿಯಂತೆ, ದಿ। ಹಿರಿಯ ಬಲಿಪರ ಕಾಲದಲ್ಲಿ ವರ್ಷಕ್ಕೆ ೪-೫ ಶ್ರೀದೇವೀ ಮಹಾತ್ಮೆ ನಡೆಯುತ್ತಿದ್ದು, ನಂತರದ ವರ್ಷಗಳಲ್ಲಿ (ತಿರುಗಾಟ ಆರಂಭದ ವರ್ಷ ೧೯೫೨) ೧೦-೧೫

ಪ್ರದರ್ಶನ ನಡೆಯುತ್ತಿತ್ತು. ಕಿರಿಯ ಬಲಿಪ ನಾರಾಯಣ ಭಾಗವತರ ತಿರುಗಾಟದ ಪ್ರಾರಂಭದಲ್ಲಿ ವರ್ಷಕ್ಕೆ ೨೦-೨೮ ಶ್ರೀದೇವೀ ಮಹಾತ್ಮೆ ಪ್ರದರ್ಶನ ನಡೆಯುತ್ತಿತ್ತು. ಆದರೆ ಈಗ ೧೫೦೦ಕ್ಕೂ ಮಿಕ್ಕಿ ಪ್ರದರ್ಶನಗಳು ನಡೆಯುವುದಕ್ಕೆ ಕಾರಣವನ್ನು ತಿಳಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕಟೀಲು ಮೇಳದ ಶ್ರೀದೇವೀ ಮಹಾತ್ಮೆ ಆಟವನ್ನು ನೋಡಲು ಹೋಗುವುದೆಂದರೆ ಅಮ್ಮನನ್ನು ನೋಡಲು ಹೋಗುವುದೆಂದೇ ಪ್ರೇಕ್ಷಕರ/ಭಕ್ತರ ನಂಬಿಕೆ. ಪ್ರಧಾನವಾಗಿ ಹರಕೆ ಬಯಲಾಟವಾಗಿ ರೂಪುಗೊಂಡಿರುವ ಈ ಪ್ರಸಂಗವು ಉಳಿಸಿಕೊಂಡು ಬಂದಿರುವ ಮೌಲ್ಯಗಳು, ಜನಪ್ರಿಯತೆ, ಆರಾಧನಾ ಮಹತ್ವವನ್ನು ಕಲಾವಿದರು, ಪ್ರೇಕ್ಷಕರು ಹಾಗೂ ಸಂಘಟಕರ ದೃಷ್ಟಿಕೋನದಲ್ಲಿ ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಮಾತರ್ಮೇ ಮಧುಕೈಟಭಘ್ನಿ ಮಹಿಷಪ್ರಾಣಾಪಹಾರೋದ್ಯಮೇ
ಹೇಲಾನಿರ್ಮಿತಧೂಮ್ರ ಲೋಚನ ವಧೇ ಹೇ ಚಂಡಮುಂಡಾರ್ದಿನಿ।
ನಿಶ್ಯೇಷೀಕೃತ ರಕ್ತಬೀಜದನುಜೇ ನಿತ್ಯೇ ನಿಶುಂಭಾಪಹೇ
ಶುಂಭಧ್ವಂಸಿನಿ ಸಂಹರಾಶು ದುರಿತಂ ದುರ್ಗೇ ನಮಸ್ತೇಂಬಿಕೇ॥

(ಶ್ರೀ ದುರ್ಗಾಪರಮೇಶ್ವರಿ ಸ್ತೋತ್ರದ ಶ್ಲೋಕ)

ಲೋಕಕಂಟಕರಾಗಿದ್ದ ಹಲವು ರಕ್ಕಸರನ್ನು ಶ್ರೀದೇವಿಯು ಸಂಹಾರ ಮಾಡಿರುವ ಬಗೆಯನ್ನು ಈ ಒಂದು ಶ್ಲೋಕವು ವಿವರಿಸಿದೆ. ಇದು ಸಂಪೂರ್ಣ ಶ್ರೀದೇವೀ ಮಹಾತ್ಮೆಯನ್ನು ಅಡಕಗೊಳಿಸಿದೆ. ಈ ಪುರಾಣ ಕಥಾಭಾಗವು ಯಕ್ಷಗಾನ ಪ್ರದರ್ಶನಕ್ಕಾಗುವಾಗ ಯಾವ ರೀತಿ ಸರಳಗೊಂಡು, ಜನಾಕರ್ಷಕವಾಗಿ, ಆರಾಧನಾ ಮೌಲ್ಯವನ್ನು ಉಳಿಸಿಕೊಂಡು ರೂಪುಗೊಂಡಿದೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ ಮತ್ತು ವಿಧಾನ

ಯಕ್ಷಗಾನದ ಎರಡು ಪ್ರಧಾನ ತಿಟ್ಟುಗಳಾದ ತೆಂಕು ಹಾಗೂ ಬಡಗು ತಿಟ್ಟುಗಳಲ್ಲಿ ಅಧಿಕ ಪ್ರದರ್ಶನವನ್ನು ಕಾಣುವ ಪ್ರಸಂಗ ಇದಾಗಿದ್ದು ಈ ಅಧ್ಯಯನದಲ್ಲಿ ತೆಂಕುತಿಟ್ಟಿನಲ್ಲಿ ಪ್ರದರ್ಶಿತವಾಗುವ ಶ್ರೀದೇವೀ ಮಹಾತ್ಮೆಯನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಶ್ರೀದೇವೀ ಮಹಾತ್ಮೆ ಪ್ರಸಂಗವು ಅತ್ಯಧಿಕ ಪ್ರದರ್ಶನಗಳನ್ನು ಕಾಣುವುದರೊಂದಿಗೆ ಈ ಪ್ರಸಂಗವೊಂದನ್ನೇ ಕನ್ನಡದಲ್ಲಿ ಸುಮಾರು ಇಪ್ಪತ್ತು ಕವಿಗಳು ರಚಿಸಿದ್ದಾರೆ. ಇವುಗಳಲ್ಲದೆ ತುಳು, ಮಲೆಯಾಳಂ, ಹಿಂದಿ

ಮುಂತಾದ ಭಾಷೆಗಳಲ್ಲೂ ಶ್ರೀದೇವೀ ಮಹಾತ್ಮೆ ಪ್ರಸಂಗವು ರಚಿತವಾಗಿದೆ. ಇದರಲ್ಲಿ ದೇವೀದಾಸನ ಪ್ರಸಂಗವು ರಂಗಪಠ್ಯವಾಗಿ ಬಳಕೆಯಾಗದೆ ಕಾವ್ಯಾತ್ಮಕ ಅಂಶಗಳನ್ನು ಹೆಚ್ಚು ಒಳಗೊಂಡಿದ್ದು ಉಳಿದ ಪ್ರಸಂಗಗಳು ರಂಗಕ್ಕೆ ಬಳಕೆಯಾಗುವಂತೆ ರಚಿತವಾಗಿದೆ. ಆದರೂ ಈ ಎಲ್ಲಾ ಪ್ರಸಂಗಗಳು ಪ್ರದರ್ಶನಕ್ಕೆ ಬಳಕೆಯಾಗುವುದಿಲ್ಲ. ಆರಂಭಿಕ ಹಂತದ ಕೆಲವು ಪ್ರಸಂಗಗಳು ಲಿಖಿತ ರೂಪದಲ್ಲಿ ಲಭ್ಯವಾಗದೇ ಇರುವುದರಿಂದ ರಂಗದಲ್ಲಿ ಪ್ರಧಾನವಾಗಿ ಹಿರಿಯ ಬಲಿಪ ನಾರಾಯಣ ಭಾಗವತರ, ಅಗರಿ ಶ್ರೀನಿವಾಸ ಭಾಗವತರ ಹಾಗೂ ಕಿರಿಯ ಬಲಿಪ ನಾರಾಯಣ ಭಾಗವತರ ಪ್ರಸಂಗಗಳು ಬಳಕೆಯಾಗುತ್ತಾ ಬಂದಿವೆ.

ಶ್ರೀದೇವೀ ಮಹಾತ್ಮೆ ಪ್ರಸಂಗಕ್ಕೆ ಆಕರವಾದ ಪುರಾಣ ಗ್ರಂಥಗಳು ಮತ್ತು ಕಾವ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಯಾವ ಪುರಾಣಗಳಲ್ಲಿ ಶ್ರೀದೇವೀ ಮಹಾತ್ಮೆಯ ಕಥೆ ರೂಪುಗೊಂಡಿದೆ ಎಂಬುದನ್ನು ಅಭ್ಯಸಿಸಲಾಗಿದೆ. ಶ್ರೀದೇವೀ ಮಹಾತ್ಮೆಯ ಕಥೆಯು ಮುಖ್ಯವಾಗಿ ಸಂಸ್ಕೃತ ಹಾಗೂ ಇತರ ಭಾಷೆಗಳಲ್ಲೂ ಇರುವುದರಿಂದ ಅವುಗಳನ್ನು ಸಂಗ್ರಹಿಸಿ ಶ್ರೀದೇವೀ ಮಹಾತ್ಮೆಯ ಒಟ್ಟಂದವನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. ಯಕ್ಷಗಾನ ಪ್ರಸಂಗಗಳಲ್ಲಿ ಭಿನ್ನವಾಗಿ ನಿಲ್ಲುವಂತಹ ಶ್ರೀದೇವೀ ಮಹಾತ್ಮೆ ಪ್ರಸಂಗವು, ಹಲವು ಯಕ್ಷಗಾನ ಕವಿಗಳಿಂದ ರಚಿಸಲ್ಪಟ್ಟಿರುವುದರಿಂದ ವಿವಿಧ ಕವಿಗಳ ಶ್ರೀದೇವೀ ಮಹಾತ್ಮೆ ಪ್ರಸಂಗಗಳು ಮತ್ತು ಪ್ರಧಾನವಾಗಿ ರಂಗಕ್ಕೆ ಬಳಕೆಯಾಗುವ ಆ ಪ್ರಸಂಗಗಳು ರಂಗಕ್ಕೆ ಹೇಗೆ ಬಳಕೆಯಾಗುತ್ತವೆ, ಪ್ರತಿಯೊಬ್ಬ ಕವಿಯು ಕಟ್ಟಿಕೊಡುವಂತಹ ಶ್ರೀದೇವೀ ಮಹಾತ್ಮೆ ಪ್ರಸಂಗದ ಕಥೆ ಹಾಗೂ ನಡೆಯನ್ನು ಅಧ್ಯಯನ ಮಾಡುವುದರ ಜೊತೆಗೇ ಅವುಗಳ ಸಾಹಿತ್ತಿಕ ಅಂಶವನ್ನು ಆಯಾ ಪ್ರಸಂಗ ಪಠ್ಯದ ಮೂಲಕ ವಿಶ್ಲೇಷಿಸಲಾಗಿದೆ. ಪುರಾಣ ಹಾಗೂ ಪ್ರಸಂಗ ಸಾಹಿತ್ಯದ ಕಥೆಗಳಲ್ಲಿನ ಸಾಮ್ಯತೆ, ವ್ಯತ್ಯಾಸಗಳು ಮತ್ತು ಕಥೆಯು ವಿಸ್ತರಣೆಗೊಂಡಿರುವ ಕುರಿತು, ಪುರಾಣವು ಪ್ರಸಂಗಕ್ಕೆ ಬಳಕೆಯಾಗಿರುವ ಹೊಸ ಆಯಾಮಗಳ ಕುರಿತು ಈ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಶ್ರೀದೇವೀ ಮಹಾತ್ಮೆಯು ಇಷ್ಟರ ಮಟ್ಟಿಗೆ ಜನಪ್ರಿಯತೆಯನ್ನು ಉಳಿಸಿಕೊಂಡು ಬರಲು ಪ್ರಮುಖ ಕಾರಣ ಪ್ರದರ್ಶನ. ಈ ಪ್ರಸಂಗದಲ್ಲಿ ಬರುವ ಪಾತ್ರಗಳ ವೈವಿಧ್ಯ ಮತ್ತು ಅವುಗಳ ಲಕ್ಷಣಗಳು, ಅವುಗಳು ರಂಗದಲ್ಲಿ ಬಳಕೆಯಾಗುವ ರೀತಿ, ಈ ಪ್ರಸಂಗದ ಆರಂಭಿಕ ಹಂತ, ಬೆಳೆದು ಬಂದಿರುವ ಬಗೆ, ವೈಶಿಷ್ಟ್ಯಗಳು, ಇತರ ಕಲಾರಂಗದಲ್ಲಿ ಈ ಪ್ರಸಂಗವು ಬಳಕೆಯಾಗುತ್ತಿರುವ ರೀತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

“ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ” ಎಂಬ ತತ್ವಾರ್ಥವಿರುವ ಶ್ರೀದೇವೀ ಮಹಾತ್ಮೆಯ ಒಟ್ಟು ಯಕ್ಷಗಾನದ ಸ್ವರೂಪವನ್ನು ಕಟ್ಟಿಕೊಡುವಲ್ಲಿ ಪ್ರಸಂಗದ ಕೊಡುಗೆ, ಪುರಾತನವೂ, ವಿಶಿಷ್ಟವೂ, ಜನಪ್ರಿಯವೂ ಆದ ಪ್ರಸಂಗವಾದುದರಿಂದ ಈ ಪ್ರಸಂಗಕ್ಕಿರುವ ಆರಾಧನಾ ಮಹತ್ವ, ಜನಪ್ರಿಯತೆಗೆ ಕಾರಣವಾಗಿರುವ ಜನರ ಭಾವುಕತೆಯನ್ನು ಒಳಗೊಂಡ ಅಂಶಗಳು, ಪ್ರದರ್ಶನದ ಒಟ್ಟು ಸ್ವರೂಪ, ಪುರಾಣ ಕಥೆಯನ್ನು ಹೇಗೆ ವೈಭವೀಕರಿಸಲಾಗಿದೆ, ಪ್ರದರ್ಶನ ಯೋಗ್ಯವಾಗಿ ಪುರಾಣವನ್ನು ಕಟ್ಟಿಕೊಂಡಿರುವ ರೀತಿ ಮುಂತಾದುವುಗಳನ್ನು ಈ ಅಧ್ಯಯನದಲ್ಲಿ ಮುಖ್ಯವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಈ ಸಂಶೋಧನೆಯು ಪಠ್ಯ ಮತ್ತು ಪ್ರದರ್ಶನ ಎಂಬ ಎರಡು ನೆಲೆಯ ವಿಶ್ಲೇಷಣೆಯನ್ನು ಒಳಗೊಂಡಿರುವುದರಿಂದ ಗ್ರಂಥಾಧ್ಯಯನ ಮತ್ತು ಕ್ಷೇತ್ರಕಾರ್ಯ ಎರಡನ್ನೂ ಮಾಡಬೇಕಿದೆ. ವಿವಿಧ ಪ್ರಸಂಗಗಳ ಕ್ರೋಢೀಕರಣ, ಅವುಗಳ ತೌಲನಿಕ ಅಧ್ಯಯನದ ಮೂಲಕ ಪ್ರಸಂಗ ಪಠ್ಯದ ವೈಶಿಷ್ಟ್ಯವನ್ನು ಗುರುತಿಸಬೇಕಿದೆ. ಶ್ರೀದೇವೀ ಮಹಾತ್ಮೆಯ ಕುರಿತಾದ ಸಂಸ್ಕೃತ, ಕನ್ನಡ ಹಾಗೂ ತುಳು ಭಾಷೆಯ ಕೃತಿಗಳನ್ನು ಗಮನಿಸಿ ಅಲ್ಲಿನ ಕಥಾವಸ್ತು ಯಕ್ಷಗಾನ ಪ್ರಸಂಗದಲ್ಲಿ ಹೇಗೆ ಒಡಮೂಡಿದೆ ಎಂಬುದನ್ನು ಅರ್ಥೈಸಲು ಕೂಡಾ ತುಲನಾತ್ಮಕ ನೆಲೆಯನ್ನು ಆಶ್ರಯಿಸಬೇಕಿದೆ.

ಇದಲ್ಲದೇ ಪ್ರದರ್ಶನ ಕುರಿತಾದ ವಿಶ್ಲೇಷಣೆಗೆ ಹಲವು ಬಯಲಾಟಗಳನ್ನು ದಾಖಲಿಸಿಕೊಂಡು, ಕಲಾವಿದರನ್ನು ಸಂದರ್ಶಿಸಿ ವಿಶ್ಲೇಷಣೆ ಮಾಡಬೇಕಿದೆ. ಈ ಹಿನ್ನೆಲೆಯಿಂದ ಈ ಅಧ್ಯಯನದಲ್ಲಿ ಕ್ಷೇತ್ರಕಾರ್ಯಕ್ಕೆ ಬಹಳ ಮಹತ್ವ ಪ್ರಾಪ್ತವಾಗಿದೆ. ಮಹಾಪ್ರಬಂಧದ ರಚನೆಯಲ್ಲಿ ವಿಶ್ಲೇಷಣೆ, ವಿವರಣೆಯ ಮೂಲಕ ತೌಲನಿಕ ಅಧ್ಯಯನಕ್ಕೂ ಒತ್ತು ನೀಡಿ, ಕ್ಷೇತ್ರಕಾರ್ಯದ ಮೂಲಕ ಪ್ರದರ್ಶನ ವೈಶಿಷ್ಟ್ಯಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಈವರೆಗಿನ ಅಧ್ಯಯನಗಳ ಸಮೀಕ್ಷೆ

ಈ ಅಧ್ಯಯನದ ಸ್ಥೂಲ ಮತ್ತು ಸೂಕ್ಷ್ಮ ವಿವರಗಳನ್ನು ಅನುಲಕ್ಷಿಸಿ ಈ ಸಮೀಕ್ಷೆಯಲ್ಲಿ ಮುಖ್ಯವಾಗಿ ಐದು ನೆಲೆಗಳನ್ನು ಗುರುತಿಸಿಕೊಂಡಿದ್ದೇನೆ. ಆಯಾ ಭಾಗದ ಕೃತಿಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

- **ಯಕ್ಷಗಾನ ಸಂಬಂಧಿ ಕೃತಿಗಳು ಹಾಗೂ ಬಿಡಿ ಲೇಖನಗಳು**
- **ಯಕ್ಷಗಾನ ಕಲಾವಿದರ ಕುರಿತ ಅಭಿನಂದನಾ ಗ್ರಂಥಗಳು ಮತ್ತು ಜೀವನಚರಿತ್ರೆಗಳು**

- **ಶ್ರೀದೇವೀ ಮಹಾತ್ಮೆ ಪ್ರಸಂಗಕ್ಕೆ ಆಕರವಾದ ಪುರಾಣ ಗ್ರಂಥಗಳು ಮತ್ತು ಕಾವ್ಯಗಳು**
- **ಶ್ರೀದೇವೀ ಮಹಾತ್ಮೆ ಪ್ರಸಂಗ ಸಾಹಿತ್ಯ ಹಾಗೂ ಪ್ರದರ್ಶನದ ಕುರಿತ ಅಧ್ಯಯನ ಗ್ರಂಥಗಳು**
- **ಪ್ರಸಂಗ ಸಾಹಿತ್ಯ ಮತ್ತು ಪ್ರದರ್ಶನದ ಕುರಿತ ಸಂಶೋಧನ ಮಹಾಪ್ರಬಂಧಗಳು**

ಸಮೀಕ್ಷೆಯಿಂದ ತಿಳಿದುಕೊಂಡ ಗ್ರಹಿಕೆಗಳು

- ಯಕ್ಷಗಾನದ ವಿವಿಧ ಆಯಾಮಗಳಾದ ಕಲಾವಿದರ ಬದುಕು, ಹಿಮ್ಮೇಳ, ವಾಚಿಕ, ವೇಷಭೂಷಣಗಳು, ಪ್ರಸಂಗ ಸಾಹಿತ್ಯ ಮುಂತಾದವುಗಳ ಕುರಿತು ಬಿಡಿ ಅಧ್ಯಯನಗಳು ಸಾಕಷ್ಟು ನಡೆದಿವೆ. ಸಮಗ್ರ ಯಕ್ಷಗಾನದ ಅಧ್ಯಯನಗಳು ಕೆಲವಷ್ಟೇ ನಡೆದಿವೆ.
- ಯಕ್ಷಗಾನ ಪ್ರಸಂಗ ಕೃತಿಗಳು ಬಹುಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಿದ್ದರೂ ಪ್ರಸಂಗ ಸಾಹಿತ್ಯದ ವಿಶ್ಲೇಷಣೆ, ವಿಮರ್ಶೆಗಳು ಹೆಚ್ಚು ನಡೆದಿಲ್ಲ.
- ಯಕ್ಷಗಾನ ಪ್ರಸಂಗ ಕೃತಿಗಳನ್ನು ರಂಗಪಠ್ಯವಾಗಿ ಅಧ್ಯಯನಕ್ಕೊಳಪಡಿಸಿದ ಕೃತಿಗಳು ಬೆರಳೆಣಿಕೆಯಷ್ಟು ಮಾತ್ರ ಇವೆ.
- ಯಕ್ಷಗಾನದ ಉಳಿದ ಪ್ರಸಂಗಗಳಿಗಿಂತ ಭಿನ್ನವಾಗಿ ನಿಲ್ಲುವ ಶ್ರೀದೇವೀ ಮಹಾತ್ಮೆ ಪ್ರಸಂಗದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿಲ್ಲ.
- ಪುರಾಣ ಹಾಗೂ ಪ್ರಸಂಗದಲ್ಲಿ ಶ್ರೀದೇವೀ ಮಹಾತ್ಮೆ ಕಥೆ ರಚಿತವಾಗಿರುವ, ಪ್ರಸಂಗಕ್ಕೆ ಪುರಾಣವು ಆಕರವಾಗಿ ಒದಗುವ ರೀತಿಯನ್ನು ಕಂಡುಕೊಳ್ಳಬೇಕಾಗಿದೆ.
- ಪುರಾಣದ ಕಥೆಗಳು ರಂಗಪಠ್ಯವಾಗಿ ಬಳಕೆಯಾಗುವಾಗ ಶ್ರೀದೇವೀ ಮಹಾತ್ಮೆ ಪ್ರಸಂಗದಲ್ಲಿ ಯಾವ ರೀತಿಯ ಬದಲಾವಣೆಗಳು, ಸಾಮ್ಯತೆಗಳು ಹಾಗೂ ಕಥೆಗಳ ಬಳಕೆಯನ್ನು ತಿಳಿದುಕೊಳ್ಳಬೇಕಾಗಿದೆ.
- ಶ್ರೀದೇವೀ ಮಹಾತ್ಮೆಯ ಕೆಲವು ಪಾತ್ರಗಳನ್ನು ಹೆಸರುವಾಸಿಯಾದ ಕಲಾವಿದರ ಸಾಧನೆಗಳನ್ನು, ಜೀವನವನ್ನು ಹೇಳುವಾಗ ಮಾತ್ರವೇ ಆ ಆಯಾ ಕಲಾವಿದರ ಮೂಲಕ ಪಾತ್ರಚಿತ್ರಣಗಳನ್ನು ಕೊಡಲಾಗಿದೆಯೇ ಹೊರತು ಪ್ರತ್ಯೇಕವಾದ ಅಧ್ಯಯನಗಳು ನಡೆದಿಲ್ಲ.

- ಶ್ರೀದೇವೀ ಮಹಾತ್ಮೆ ಪ್ರಸಂಗವನ್ನು ಹಲವು ಪ್ರಸಂಗ ಕರ್ತೃಗಳು ರಚಿಸಿದ್ದು, ಇವುಗಳಲ್ಲಿ ರಂಗಪಠ್ಯವಾಗಿ ಬಳಕೆಯಾಗುವ ಹಾಗೂ ಇತರ ಪ್ರಸಂಗಗಳ ನಡುವೆ ಇರುವ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಪರಿಶೀಲಿಸಬೇಕಾಗಿದೆ.
- ಶ್ರೀದೇವೀ ಮಹಾತ್ಮೆ ಪ್ರಸಂಗವು ರಂಗಕ್ಕೆ ಬಳಕೆಯಾಗುವ ರೀತಿಯ ಕುರಿತು ವಿಸ್ತೃತ ಅಧ್ಯಯನ ನಡೆದಿಲ್ಲ.
- ಚಾಲ್ತಿಯಲ್ಲಿರುವ ಶ್ರೀದೇವೀ ಮಹಾತ್ಮೆ ಪ್ರಸಂಗಗಳ ಮೂಲ ಪಠ್ಯದಲ್ಲಿರುವ ಪದ್ಯಗಳನ್ನು, ಪ್ರದರ್ಶನಕ್ಕೆ ಬಳಸಲ್ಪಡುವ ರೀತಿಯನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ.
- ಹೆಚ್ಚಾಗಿ ಹರಕೆ ಬಯಲಾಟವಾಗಿ ಪ್ರದರ್ಶನಗೊಳ್ಳುವ ಈ ಪ್ರಸಂಗದ ಆರಾಧನಾ ಮೌಲ್ಯ, ಪೌರಾಣಿಕ ಮಹತ್ವ ಹಾಗೂ ನಂಬಿಕೆಗಳ ಬಗೆಗೆ ಅವಲೋಕಿಸಬೇಕಾಗಿದೆ.
- ಯಕ್ಷಗಾನದಲ್ಲಿ ಸಾಮಾನ್ಯವಾಗಿ ಬರುವಂತಹ ಎಲ್ಲಾ ಬಗೆಯ ವೇಷಗಳೂ ಈ ಒಂದೇ ಪ್ರಸಂಗದಲ್ಲಿ ಕಾಣಸಿಗುವುದರಿಂದ ಶ್ರೀದೇವೀ ಮಹಾತ್ಮೆಯ ಪಾತ್ರಗಳು, ವೇಷಭೂಷಣ, ಮುಖವರ್ಣಿಕೆಯ ಕುರಿತು ಅಧ್ಯಯನವನ್ನು ನಡೆಸಬೇಕಾಗಿದೆ.
- ಯಕ್ಷಗಾನದ ಈ ಪ್ರಸಂಗವನ್ನು ಇತರ ಕಲಾಪ್ರಕಾರಗಳಲ್ಲಿ ಮತ್ತು ಭಾಷೆಗಳಲ್ಲಿ ಯಾವ ರೀತಿಯಾಗಿ ಬಳಸಿಕೊಳ್ಳಲಾಗಿದೆ ಎಂಬ ಕುರಿತು ಅಧ್ಯಯನವನ್ನು ಮಾಡಬೇಕಾಗಿದೆ.
- ಶ್ರೀದೇವೀ ಮಹಾತ್ಮೆ ಪ್ರಸಂಗದಲ್ಲಾಗಿರುವ ವಿಭಿನ್ನ ಪ್ರಯೋಗಗಳನ್ನು ತಿಳಿದುಕೊಳ್ಳಬೇಕಾಗಿದೆ.
- ಶ್ರೀದೇವೀ ಮಹಾತ್ಮೆ ಪ್ರಸಂಗವು ಬೆಳೆದು ಬಂದಿರುವ ರೀತಿ ಹಾಗೂ ಯಕ್ಷಗಾನ ಕ್ಷೇತ್ರಕ್ಕೆ ಪ್ರತ್ಯೇಕವಾಗಿ ನೀಡುತ್ತಿರುವ ಕೊಡುಗೆಯನ್ನು ಚರ್ಚಿಸಬೇಕಾಗಿದೆ.
- ವರ್ಷವೊಂದರಲ್ಲಿ ಅತೀ ಹೆಚ್ಚು ಪ್ರದರ್ಶನವನ್ನು ಕಾಣುವಂತಹ ಪ್ರಸಂಗವೆಂದು ಗುರುತಿಸಿಕೊಂಡಿರುವ ಈ ಪ್ರಸಂಗಕ್ಕೆ ಇರುವ ಜನಮನ್ನಣೆಯನ್ನು ಗುರುತಿಸಬೇಕಾಗಿದೆ.
- ಶ್ರೀದೇವೀ ಮಹಾತ್ಮೆ ಪ್ರದರ್ಶನದಲ್ಲಿ ನಡೆದುಕೊಂಡು ಬಂದಿರುವ ವೇಷಭೂಷಣ ಹಾಗೂ ಪ್ರದರ್ಶನ ಕ್ರಮಗಳ ಕುರಿತು ವಿಶ್ಲೇಷಣೆಯನ್ನು ಮಾಡಬೇಕಾಗಿದೆ.

ಒಟ್ಟು ಅವಲೋಕನವನ್ನು ನಡೆಸಿದಾಗ ವರ್ಷವೊಂದರಲ್ಲಿ ಅತೀ ಹೆಚ್ಚು ಪ್ರದರ್ಶನವನ್ನು ನೀಡಿ ಯಕ್ಷಗಾನ ಕ್ಷೇತ್ರಕ್ಕೆ ಹೊಸ ಆಯಾಮವನ್ನು ದೊರಕಿಸಿ ಕೊಡುತ್ತಿರುವ ಶ್ರೀದೇವೀ

ಮಹಾತ್ಮೆಯ ಪ್ರಸಂಗ ಸಾಹಿತ್ಯ ಹಾಗೂ ಪ್ರದರ್ಶನದ ಕುರಿತು ವಿಸ್ತೃತ ಅಧ್ಯಯನವು ನಡೆದಿಲ್ಲ. ಈ ಪ್ರಸಂಗದಲ್ಲಿ ಬರುವಂತಹ ವಿಶೇಷ ಪಾತ್ರಗಳನ್ನು ವಿವರಿಸುವ ಬಿಡಿ ಲೇಖನಗಳು ಹಾಗೂ ಕಲಾವಿದರ ಬದುಕಿನ ಮೂಲಕ ಪಾತ್ರಲಕ್ಷಣಗಳನ್ನು ಮಾತ್ರ ವಿವರಿಸಲಾಗಿದೆ. ಅತೀ ಹೆಚ್ಚು ಪ್ರದರ್ಶನ ಮಾತ್ರವಲ್ಲದೇ ಶ್ರೀದೇವೀ ಮಹಾತ್ಮೆ ಕಾವ್ಯಗಳು, ಪ್ರಸಂಗಗಳು, ಈ ಕಥೆ ಬರುವಂತಹ ಪುರಾಣಗಳು ಹೇರಳವಾಗಿ ರಚಿತವಾಗಿವೆ. ಇಷ್ಟರ ಮಟ್ಟಿಗೆ ಜನಮನ್ನಣೆಯನ್ನು ಉಳಿಸಿಕೊಂಡು ಬಂದಿರುವ ಈ ಕಥಾಗುಚ್ಛವು ಯಕ್ಷಗಾನದಲ್ಲಿ ಸಮರ್ಥವಾಗಿ ಆರಾಧನಾ ಮೌಲ್ಯದೊಂದಿಗೆ ಬೇಡಿಕೆಯನ್ನು ಉಳಿಸಿಕೊಂಡು ಬಂದಿರುವ ಬಗ್ಗೆ ಈ ಅಧ್ಯಯನವನ್ನು ನಡೆಸಲಾಗಿದೆ.

ಈ ಅಧ್ಯಯನದಲ್ಲಿ ಶ್ರೀದೇವೀ ಮಹಾತ್ಮೆಯನ್ನು ಪುರಾಣ, ಪ್ರಸಂಗಸಾಹಿತ್ಯ ಹಾಗೂ ಪ್ರದರ್ಶನವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಲಾಗಿದೆ. ಶ್ರೀದೇವೀ ಮಹಾತ್ಮೆ ಯಕ್ಷಗಾನ ಪ್ರದರ್ಶನವು ಪ್ರಮುಖವಾಗಿ ಮೂರು ಕವಿಗಳ ಪ್ರಸಂಗ ಸಾಹಿತ್ಯವನ್ನು ಬಳಸಿಕೊಂಡು ಪ್ರದರ್ಶನಗೊಳ್ಳುತ್ತಿದೆಯಾದರೂ, ಇವುಗಳು ಒಂದರೊಳಗೊಂದು ಬೆರೆತು ಹೋಗಿವೆ. ಇವುಗಳನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ. ಕಲಾವಿದರ ಸಂದರ್ಶನ, ಈ ಪ್ರಸಂಗದ ಪ್ರದರ್ಶನ, ಪ್ರಸಂಗ ಸಾಹಿತ್ಯ, ಪುರಾಣಗಳು ಹಾಗೂ ಕೆಲವು ಐತಿಹ್ಯಗಳನ್ನು ಆಕರವಾಗಿ ಬಳಸಿಕೊಂಡು ತೆಂಕುತಿಟ್ಟು ಯಕ್ಷಗಾನದಲ್ಲಿ ಶ್ರೀದೇವೀ ಮಹಾತ್ಮೆ ಯಾವ ರೀತಿಯಾಗಿ ಬೆಳೆದು ಬಂದಿದೆ ಎಂಬುದರ ವಿಸ್ತಾರ ಚಿತ್ರಣವನ್ನು ಈ ಅಧ್ಯಯನದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಪ್ರಸ್ತಾವನೆ ಮತ್ತು ಸಮಾರೋಪವನ್ನು ಹೊರತುಪಡಿಸಿ ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಅಧ್ಯಾಯ ಒಂದು: ಶ್ರೀದೇವೀ ಮಹಾತ್ಮೆ ಕಥನದ ಉಗಮ ಮತ್ತು ವಿಕಾಸ

ಶ್ರೀದೇವೀ ಮಹಾತ್ಮೆಗೆ ಆಕರವಾದಂತಹ ಪುರಾಣ ಗ್ರಂಥಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆರಂಭದಲ್ಲಿ ಪುರಾಣದ ಕುರಿತಾಗಿಯೂ, ಯಕ್ಷಗಾನಕ್ಕೆ ಆಕರವಾಗಿ ಪುರಾಣ ಗ್ರಂಥಗಳು ಬಳಕೆಯಾಗುವ ವಿಧಾನದ ಕುರಿತು ಹೇಳಲಾಗಿದೆ. ಈ ಅಧ್ಯಾಯವನ್ನು ಸಂಸ್ಕೃತ ಸಾಹಿತ್ಯ, ಕನ್ನಡ ಸಾಹಿತ್ಯ, ತುಳು ಸಾಹಿತ್ಯ ಮತ್ತು ಶ್ರೀದೇವೀ ಮಹಾತ್ಮೆ ಕಥಾ ವಿವೇಚನೆ ಎಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಸಪ್ತಶತೀ ಗ್ರಂಥ ಹಾಗೂ ಚಿದಾನಂದಾವಧೂತರ ಶ್ರೀದೇವೀ ಮಹಾತ್ಮೆಯು ಪಾರಾಯಣ ಗ್ರಂಥಗಳಾಗಿ ಹಿಂದಿನಿಂದಲೂ ಬಳಕೆಯಾಗುತ್ತಾ ಬಂದಿವೆ. ದೇವಿಯ ಶಕ್ತಿಯನ್ನು ವರ್ಣಿಸುವ ಈ ಗ್ರಂಥಗಳೇ ಯಕ್ಷಗಾನ ಪ್ರಸಂಗ ರಚನೆಗೆ ಮೂಲವಾಯಿತು. ಶ್ರೀದೇವೀ ಮಹಾತ್ಮೆ ಪ್ರಸಂಗ ರಚನೆಗೆ ಮೂಲವಾಗಿ ಸಂಸ್ಕೃತದಲ್ಲಿ ಸಪ್ತಶತೀ ಮತ್ತು ಶ್ರೀಮದ್ ದೇವೀಭಾಗವತ ಹಾಗೂ ಕನ್ನಡದಲ್ಲಿ ಶ್ರೀ ಚಿದಾನಂದಾವಧೂತ ವಿರಚಿತ ಶ್ರೀದೇವೀ ಮಹಾತ್ಮೆಯನ್ನು ಪರಿಗಣಿಸಲಾಗುತ್ತದೆ. ಆದರೆ ಈ ಪ್ರಸಂಗದಲ್ಲಿ ಬರುವಂತಹ ಕಥೆಗಳು ಇತರ ಪುರಾಣಗಳಲ್ಲೂ, ಕಾವ್ಯಗಳಲ್ಲೂ ಇರುವುದನ್ನು ಇಲ್ಲಿ ಗುರುತಿಸಲಾಗಿದೆ. ಈ ಯಕ್ಷಗಾನ ಪ್ರಸಂಗವನ್ನು ಅಧ್ಯಯನಕ್ಕೆ ಒಳಪಡಿಸುವಾಗ ಆಕರಗ್ರಂಥಗಳಾಗಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಎಲ್ಲಾ ಗ್ರಂಥಗಳು ಕೂಡಾ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಯಕ್ಷಗಾನ ಪ್ರಸಂಗದ ಕಥೆಯನ್ನು ಪುರಾಣಗಳಲ್ಲಿ ಯಾವ ರೀತಿ ಕಟ್ಟಿಕೊಡಲಾಗಿದೆ ಎಂಬುದನ್ನು ವಿಸ್ತೃತವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಕರಾವಳಿ ಭಾಗದ ಭಾಷೆಗಳಾದ ಕನ್ನಡ ಹಾಗೂ ತುಳು ಭಾಷೆಗಳನ್ನು ಗಣನೆಗೆ ತೆಗೆದುಕೊಂಡು, ಈ ಭಾಷೆಗಳಲ್ಲಿ ರಚಿತವಾಗಿರುವ ಶ್ರೀದೇವೀ ಮಹಾತ್ಮೆ ಕಾವ್ಯಗಳನ್ನೂ ಕೂಡಾ ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

ದೇವಿಯ ಮಹಾತ್ಮೆಗೆ ಸಂಬಂಧಿಸಿದ ಪುರಾಣಗಳನ್ನು ಗಮನಿಸಿದರೆ ದೇವೀ ಸಂಬಂಧಿಯಾದ ಕಥೆಯನ್ನು ಮೂರು ವಿಧವಾಗಿ ವಿಂಗಡಿಸಿಕೊಳ್ಳಬಹುದು. ಮೊದಲನೆಯದು ದೇವಿಯೇ ಪರಮೋಚ್ಛ ಶಕ್ತಿ ಎಂದು ವರ್ಣಿಸುವ ಶಾಕ್ತ್ಯ ಪುರಾಣಗಳು, ಎರಡನೆಯದು ವಿಷ್ಣುವಿನ ಅನುಪಾಯಿನಿಯಾಗಿರುವ (ಬೇರ್ಪಡದವಳು) ವಿಷ್ಣುವಿನ ಸರ್ವೋತ್ತಮತ್ವದ ಅಡಿಯಲ್ಲಿ ಕೆಲಸಮಾಡುವ ಶಕ್ತಿಯನ್ನು ವರ್ಣಿಸುವ ವೈಷ್ಣವ ಪುರಾಣಗಳು ಮತ್ತು ಮೂರನೆಯದು ಶಿವನ ಅರ್ಧಾಂಗಿಣಿ ಪಾರ್ವತೀ ಶಕ್ತಿ ಎಂದು ವರ್ಣಿಸುವ ಶೈವ ಪುರಾಣಗಳು. ಈ ಮೂರು ಪ್ರಾಧಾನ್ಯತೆಯಲ್ಲಿ ವರ್ಣಿಸಲ್ಪಡುವ ಶಕ್ತಿಗಳಿಂದ ಆಯಾ ಪುರಾಣಗಳಲ್ಲಿ ಶ್ರೀದೇವೀ ಮಹಾತ್ಮೆಯು ವರ್ಣಿತಗೊಳ್ಳುತ್ತದೆ.

ಶ್ರೀದೇವೀ ಮಹಾತ್ಮೆಯನ್ನು ಒಳಗೊಂಡಿರುವ ಸಂಸ್ಕೃತ ಪುರಾಣಗಳಲ್ಲಿ ಶ್ರೀತ್ರಿಪುರಾ ರಹಸ್ಯ ಹಾಗೂ ಶ್ರೀಮತ್ಸ್ಯಮಹಾಪುರಾಣಂ ಬಿಟ್ಟು ಉಳಿದವುಗಳೆಲ್ಲಾ ವೇದವ್ಯಾಸರಿಂದಲೇ ರಚಿತವಾದರೂ, ಪ್ರತೀ ಗ್ರಂಥದಲ್ಲಿ ಕಥೆಯಾರಂಭದ ಮುನ್ನ ನಿರೂಪಣಾ ವಿಧಾನವು ಭಿನ್ನವಾಗಿದೆ. ಶ್ರೀದೇವೀ ಮಹಾತ್ಮೆ ಕಥೆಯ ವಿಸ್ತೃತ ರೂಪವು ಮಾರ್ಕಂಡೇಯ ಪುರಾಣ, ಶ್ರೀಮದ್ ದೇವೀಭಾಗವತ ಮತ್ತು ಶ್ರೀ ಚಿದಾನಂದಾವಧೂತ ವಿರಚಿತ ಶ್ರೀದೇವೀ ಮಹಾತ್ಮೆಯಲ್ಲಿ ಮಾತ್ರವೇ

ಇದ್ದು ಉಳಿದ ಪುರಾಣಗಳಲ್ಲಿ ಆಯಾ ಪುರಾಣಗಳಿಗೆ ಅನುಗುಣವಾಗಿ ಶ್ರೀದೇವೀ ಮಹಾತ್ಮೆ ಕಥೆಯನ್ನು ಬಳಸಿಕೊಳ್ಳಲಾಗಿದೆ.

ಸಂಸ್ಕೃತ ಪುರಾಣಗಳು ಮೂಲ ಪಠ್ಯವಾಗಿ ಬಳಕೆಯಾಗಿರುವಂತೆ, ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಸಂಸ್ಕೃತ ಪಠ್ಯಗಳನ್ನು ಆಕರವಾಗಿಸಿಕೊಂಡು ಶ್ರೀದೇವಿ ಮಹಾತ್ಮೆಯು ಕಾವ್ಯ ಹಾಗೂ ಗದ್ಯ ರೂಪದಲ್ಲಿಯೂ ರಚಿತವಾಗಿವೆ. ಇವುಗಳಲ್ಲಿ ಪ್ರಮುಖವಾಗಿ ಚಿದಾನಂದಾವಧೂತರ ಶ್ರೀದೇವಿಮಹಾತ್ಮೆಯು ಯಕ್ಷಗಾನ ಪ್ರಸಂಗಕ್ಕೆ ಮುಖ್ಯ ಆಕರವಾಗಿ ಒದಗುತ್ತದೆ. ಕನ್ನಡದ ಚಿದಾನಂದಾವಧೂತ ವಿರಚಿತ ಶ್ರೀದೇವೀ ಮಹಾತ್ಮೆಯ ಕಥೆಯು ಮೂಲ ಸಂಸ್ಕೃತ ಕಥೆಗಿಂತ ಕೊಂಚ ಭಿನ್ನವಾಗಿದ್ದು, ಉಳಿದಂತೆ ಬಂದಿರುವ ಕನ್ನಡ ಹಾಗೂ ತುಳು ಶ್ರೀದೇವೀ ಮಹಾತ್ಮೆ ಕೃತಿಗಳು ಮೂಲ ಸಂಸ್ಕೃತ ಕಥೆಯನ್ನೇ ಆಧರಿಸಿ ರಚಿಸಲಾಗಿದೆ. ಕನ್ನಡ ಹಾಗೂ ತುಳು ಭಾಷೆಯಲ್ಲಿ ಬಂದಿರುವ ಶ್ರೀದೇವೀ ಮಹಾತ್ಮೆ ಕಾವ್ಯಗಳು ಕೂಡಾ ಕವಿಯ ರಚನಾ ಕೌಶಲ್ಯಕ್ಕೆ ಅನುಗುಣವಾಗಿ ಹೇಗೆ ಭಿನ್ನವಾಗಿ ರಚಿತವಾಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಈ ಎಲ್ಲಾ ಪುರಾಣಗಳಲ್ಲೂ ದೇವಿಯನ್ನು ವಿವಿಧ ಹೆಸರಿನಿಂದ ಪೂಜಿಸುವುದನ್ನು ಕಾಣಬಹುದು. ಆಕೆಯ ರೂಪ, ಮೈದೋರಿದ ಸಂದರ್ಭಕ್ಕೆ ಅನುಗುಣವಾಗಿ ಕಾತ್ಯಾಯಿನಿ, ತ್ರಿಪುರಾದೇವಿ, ಕೌಶಿಕೆ, ಪಾರ್ವತೀ, ಶಿವದೂತಿ, ಚಾಮುಂಡಾ, ಕಾಳಿಕಾ ಇತ್ಯಾದಿ ಹಲವಾರು ಹೆಸರುಗಳಿದ್ದರೂ ಕೊನೆಯಲ್ಲಿ ದೇವಿಯ ಮಹಾತ್ಮೆಯನ್ನು ಲೋಕಕ್ಕೆ ಪರಿಚಯಿಸುವ ಕವಿಯ ಉದ್ದೇಶ ಈ ಎಲ್ಲಾ ಪುರಾಣಗಳಲ್ಲೂ ಸ್ಪಷ್ಟವಾಗಿ ಕಾಣುತ್ತದೆ. ತ್ರಿಮೂರ್ತಿಗಳಿಗೆ ಆದಿಮಾಯೆ ಎಂಬ ರೂಪದಿಂದ ತಾಯಿಯಾಗಿ ಗೋಚರಿಸುವ ದೇವಿಯು ರಾಕ್ಷಸನಿಗ್ರಹಕ್ಕಾಗಿ ಪುರಾಣಗಳಲ್ಲಿ, ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಪತ್ನಿ ಪಾರ್ವತಿಯಾಗಿ, ಆಕೆಯ ಶರೀರಕೋಶದಿಂದ ಉದ್ಭವಿಸಿದ ದೇವಿ ರೂಪವು ದುಷ್ಟ ಶಿಕ್ಷಕಳಾಗಿ ರಾಕ್ಷಸರಿಗೆ ಕಂಟಕಪ್ರಾಯಳಾಗುತ್ತಾಳೆ.

ಗ್ರಂಥರೂಪದಲ್ಲಿ ಮಾತ್ರವಲ್ಲದೆ ತಾಳೆಗರಿಗಳಲ್ಲೂ, ತಾಮ್ರದ ಹಾಳೆಗಳಲ್ಲೂ ಪೌರಾಣಿಕ ಶ್ರೀದೇವೀ ಮಹಾತ್ಮೆ ಕತೆಯು ದೊರೆಯುವುದನ್ನು ಗುರುತಿಸಲಾಗಿದೆ. ಅಧ್ಯಾಯದ ಕೊನೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಎಲ್ಲಾ ಪುರಾಣಗ್ರಂಥಗಳನ್ನು ಒಟ್ಟು ವಿವೇಚನೆಗೆ ಒಳಪಡಿಸಿ, ಅವುಗಳ ನಡುವೆ ಇರುವ ಭಿನ್ನತೆ ಮತ್ತು ಸಾಮ್ಯತೆಗಳನ್ನು ಗುರುತಿಸಿ, ಅವುಗಳ ವಿಭಿನ್ನ ರಚನಾ ವಿನ್ಯಾಸಕ್ಕೆ ಕಾರಣಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಶ್ರೀದೇವೀ ಮಹಾತ್ಮೆ

ಕಥೆಯು ಈ ಎಲ್ಲಾ ಗ್ರಂಥಗಳಲ್ಲಿ ಬದಲಾವಣೆಗಳನ್ನು ಹೊಂದಿದ್ದರೂ ಕೂಡಾ ಮೂಲ ಶ್ರೀದೇವೀ ಮಹಾತ್ಮೆಯ ಕಥೆಗೆ ಎಲ್ಲೂ ಚ್ಯುತಿ ಬಾರದಂತೆ ರಚಿಸಲಾಗಿದೆ. ಇಷ್ಟೊಂದು ಪುರಾಣಗಳಲ್ಲಿ ದೇವೀ ಕಥೆ ಬಂದಿರುವುದನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಪುರಾಣಗಳು ದೇವಿ ಕಥೆಗೆ ನೀಡಿರುವ ಮಹತ್ವವನ್ನು ತಿಳಿದುಕೊಳ್ಳಬಹುದಾಗಿದೆ.

ಅಧ್ಯಾಯ ಎರಡು – ಯಕ್ಷಗಾನ ಪ್ರಸಂಗ ಪಠ್ಯವಾಗಿ ಶ್ರೀದೇವೀ ಮಹಾತ್ಮೆ.

ಈ ಅಧ್ಯಾಯದಲ್ಲಿ ಯಕ್ಷಗಾನ ಪ್ರದರ್ಶನದ ಜೀವಾಳವೆಂದೇ ಹೇಳಬಹುದಾದ ಪ್ರಸಂಗ ಸಾಹಿತ್ಯವನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಇಲ್ಲಿ ಪ್ರಸಂಗ ಪಠ್ಯದ ಸ್ವರೂಪ, ಕನ್ನಡ ಪ್ರಸಂಗಗಳು, ತುಳು ಪ್ರಸಂಗಗಳು ಎಂದು ಮೂರು ವಿಭಾಗವಾಗಿ ವಿಂಗಡಿಸಿಕೊಳ್ಳಲಾಗಿದೆ. ಯಕ್ಷಗಾನದ ಪ್ರಸಂಗ ಸಾಹಿತ್ಯದ ಸ್ವರೂಪದ ಬಗೆಗೆ ಆರಂಭದಲ್ಲಿ ವಿಶ್ಲೇಷಣೆಯನ್ನು ಮಾಡಲಾಗಿದೆ. ಮುಂದಕ್ಕೆ ಯಕ್ಷಗಾನವು ಕರಾವಳಿ ಭಾಗದ ಪ್ರದರ್ಶನ ಕಲೆಯಾದುದರಿಂದ ಇಲ್ಲಿನ ಪ್ರಧಾನ ಭಾಷೆಗಳಾದ ಕನ್ನಡ ಹಾಗೂ ತುಳು ಭಾಷೆಗಳಲ್ಲಿ ರಚಿತವಾಗಿರುವ ವಿವಿಧ ಕವಿಗಳ ಶ್ರೀದೇವೀ ಮಹಾತ್ಮೆ ಪ್ರಸಂಗಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಈ ಅಧ್ಯಾಯದಲ್ಲಿ ಪ್ರತೀ ಕವಿಗಳ ಶ್ರೀದೇವೀ ಮಹಾತ್ಮೆ ಪ್ರಸಂಗವು ಇತರ ಕವಿಗಳಿಂದ ಯಾವ ರೀತಿಯಲ್ಲಿ ಭಿನ್ನವಾದ ಕಥಾ ನಡೆಯನ್ನು ಹೊಂದಿದೆ ಎಂಬುದನ್ನು ವಿವರಿಸುವುದಕ್ಕಾಗಿ, ಆಯಾ ಕವಿಯ ಪ್ರಸಂಗವನ್ನು ಹೇಗೆ ಕಟ್ಟಿಕೊಡಲಾಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ದೇವಿದಾಸ ಕವಿಯ ದೇವಿಮಹಾತ್ಮೆಯನ್ನು ಹೊರತುಪಡಿಸಿ ವಿಶ್ಲೇಷಣೆಗೆ ಒಳಪಡಿಸಿರುವ ಇತರ ಎಲ್ಲಾ ಕನ್ನಡ ಮತ್ತು ತುಳು ಪ್ರಸಂಗಗಳು ರಂಗಪ್ರಯೋಗಕ್ಕೆ ಬಳಕೆಯಾಗುವ ಸಾಮರ್ಥ್ಯವನ್ನು ಹೊಂದಿವೆ. ಇವುಗಳನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೆ ಒಳಪಡಿಸಿ ಕವಿಗಳ ಕಥಾ ರಚನಾ ಶೈಲಿಯನ್ನು ವಿವರಿಸಲಾಗಿದೆ. ಈ ಎಲ್ಲಾ ಪ್ರಸಂಗಗಳ ಕಥಾ ವಸ್ತುವು ಒಂದೇ ಆಗಿದ್ದರೂ ಕೂಡಾ ಕವಿಯ ರಚನಾ ಕೌಶಲ್ಯಕ್ಕೆ ಅನುಗುಣವಾಗಿ ಕಥೆಯನ್ನು ಕಟ್ಟಿಕೊಡುವಲ್ಲಿ ಪ್ರಸಂಗ ಸಾಹಿತ್ಯವು ವಿಭಿನ್ನವಾಗಿ ರಚಿತಗೊಂಡಿರುವುದನ್ನು ಗುರುತಿಸಲಾಗಿದೆ.

ಅಧ್ಯಾಯ ಮೂರು: ಶ್ರೀದೇವೀ ಮಹಾತ್ಮೆ ಪ್ರಸಂಗದ ವಸ್ತು ವಿನ್ಯಾಸ

ಈ ಅಧ್ಯಾಯವು ಶ್ರೀದೇವೀ ಮಹಾತ್ಮೆ ಪ್ರಸಂಗ ಸಾಹಿತ್ಯವನ್ನು ಕೇಂದ್ರೀಕರಿಸಿ ನಡೆಸಿದ ಅಧ್ಯಯನವಾಗಿದೆ. ಪ್ರಸಂಗದ ನಡೆ, ಪುರಾಣ ಮತ್ತು ಪ್ರಸಂಗ ಪಠ್ಯ: ತೌಲನಿಕ ವಿವೇಚನೆ,

ಶ್ರೀದೇವೀ ಮಹಾತ್ಮೆ ಪ್ರಸಂಗದ ಸಾಹಿತ್ತಿಕ ವಿಶ್ಲೇಷಣೆ ಎಂದು ಮುಖ್ಯವಾಗಿ ಮೂರು ವಿಭಾಗಗಳನ್ನು ಮಾಡಿಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ಅಧ್ಯಾಯದಲ್ಲಿ ಪ್ರಯೋಗದಲ್ಲಿ ಬಳಕೆಯಾಗುವ ಶ್ರೀದೇವೀ ಮಹಾತ್ಮೆ ಪ್ರಸಂಗದ ನಡೆಯ ಕುರಿತು ಚರ್ಚಿಸಲಾಗಿದೆ. ರಂಗಪಠ್ಯವಾಗಿ ಸಾವಿರಾರು ಪ್ರದರ್ಶನಗಳನ್ನು ಕಂಡಿರುವ ದಿವಂಗತ ಹಿರಿಯ ಬಲಿಪ ನಾರಾಯಣ ಭಾಗವತರ, ದಿವಂಗತ ಅಗರಿ ಶ್ರೀನಿವಾಸ ಭಾಗವತರ ಮತ್ತು ದಿವಂಗತ ಕಿರಿಯ ಬಲಿಪ ನಾರಾಯಣ ಭಾಗವತರ ಪ್ರಸಂಗ ಪಠ್ಯವನ್ನು ಬಳಸಿಕೊಂಡು, ಪ್ರದರ್ಶನ ಭಾಗಗಳನ್ನು ಬಿಡಿಯಾಗಿರಿಸಿಕೊಂಡು ಪ್ರಸಂಗ ನಡೆಯ ಕುರಿತು ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಆಯಾ ಕಥಾ ಭಾಗದಲ್ಲಿ ಈ ಮೂವರೂ ಕವಿಗಳ ಕಥಾ ರಚನೆಯು ಹೇಗೆ ಭಿನ್ನವಾಗಿ ಚಿತ್ರಿತವಾಗಿದೆ ಎಂಬುದನ್ನು ಗುರುತಿಸಲಾಗಿದೆ. ಮುಂದಿನ ಭಾಗವಾಗಿ ಪುರಾಣ ಹಾಗೂ ಪ್ರಸಂಗ ಪಠ್ಯಗಳಲ್ಲಿ ಶ್ರೀದೇವೀ ಮಹಾತ್ಮೆ ಕಥೆಯು ರಚಿತವಾಗಿರುವ ವಿಧಾನವನ್ನು ತೌಲನಿಕವಾಗಿ ಅಭ್ಯಸಿಸಲಾಗಿದೆ. ಕೊನೆಯ ಭಾಗವಾಗಿ ಈ ಮೊದಲು ಹೇಳಿರುವ ಮೂವರು ಕವಿಗಳ ಪ್ರಸಂಗ ಸಾಹಿತ್ಯವನ್ನು ಅವುಗಳಲ್ಲಿ ಬಳಸಿರುವ ಛಂದೋಬಂಧಗಳು, ನವರಸಗಳ ಅಭಿವ್ಯಕ್ತಿ, ಅಲಂಕಾರಗಳು ಮತ್ತು ಭಾಷಾಶೈಲಿ ಇವುಗಳನ್ನು ಗಮನದಲ್ಲಿರಿಸಿಕೊಂಡು ಸಾಹಿತ್ತಿಕ ಅಧ್ಯಯನವನ್ನು ಮಾಡಲಾಗಿದೆ.

ಪ್ರಧಾನವಾಗಿ ಈ ಮೊದಲು ತಿಳಿಸಿದ ಮೂರು ಯಕ್ಷಗಾನ ಕವಿಗಳ ಪ್ರಸಂಗ ಪಠ್ಯವನ್ನು ಆಡುತ್ತಿದ್ದರೂ, ಕೆಲವೊಂದು ಬಾರಿ ಪ್ರದರ್ಶನಗಳಲ್ಲಿ ಬಳಕೆಯಾಗುವಾಗ ಒಬ್ಬರ ಪ್ರಸಂಗ ಪಠ್ಯದೊಳಗೆ ಅವಶ್ಯಕತೆಗೆ ಅನುಗುಣವಾಗಿ ಇನ್ನೊಬ್ಬರ ಪ್ರಸಂಗ ಪಠ್ಯಗಳ ಪದ್ಯಗಳು ಬಳಕೆಯಾಗುವುದನ್ನು ಕಾಣಬಹುದು. ಕಿರಿಯ ಬಲಿಪ ಭಾಗವತರು ತಮ್ಮ ಅಜ್ಜ ಬಲಿಪರ ಪದ್ಯಗಳನ್ನು ಹೇರಳವಾಗಿ ಬಳಸಿಕೊಂಡಿದ್ದಾರೆ. ಇದರೊಂದಿಗೆ ಯಕ್ಷಗಾನ ಪ್ರದರ್ಶನದ ನಿರ್ದೇಶಕರೆಂದೇ ಗುರುತಿಸಿಕೊಂಡಿರುವಂತಹ ಭಾಗವತರು ಸಂದರ್ಭಕ್ಕೆ ಅನುಗುಣವಾಗಿ ತಮ್ಮ ಸ್ವರಚಿತ ಪದ್ಯಗಳನ್ನೂ ಪ್ರದರ್ಶನ ಸಂದರ್ಭದಲ್ಲಿ ಸೇರಿಸುವುದುಂಟು. ಇವುಗಳನ್ನು ಉಲ್ಲೇಖಿಸಿ, ಪ್ರದರ್ಶನದ ಆಧಾರದ ಮೇಲೆ ಪ್ರದರ್ಶನಕ್ಕೆ ಬಳಕೆಯಾಗುವ ಪ್ರಸಂಗ ಪಠ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಮೇಲೆ ತಿಳಿಸಿರುವ ಮೂವರು ಕವಿಗಳಲ್ಲಿ ಕಿರಿಯ ಬಲಿಪ ನಾರಾಯಣ ಭಾಗವತರು ಸ್ವರಚನೆಯ ಪದ್ಯಗಳೊಂದಿಗೆ ತಮ್ಮ ಅಜ್ಜ ಹಿರಿಯ ಬಲಿಪ ನಾರಾಯಣ ಬಲಿಪ ಭಾಗವತರ

ಪದ್ಯಗಳನ್ನೇ ಪ್ರಯೋಗದಲ್ಲಿ ಬಳಸಿಕೊಳ್ಳುತ್ತಿದ್ದ ಕಾರಣ, ಪ್ರಯೋಗ ದೃಷ್ಟಿಯಲ್ಲಿ ಪ್ರಸಂಗ ಸಾಹಿತ್ಯವನ್ನು ಅಭ್ಯಸಿಸುವಾಗ 'ಬಲಿಪ ಶೈಲಿ' ಮತ್ತು 'ಅಗರಿ ಶೈಲಿ' ಎಂದು ವಿಭಾಗಿಸಿಕೊಂಡು ಶ್ರೀದೇವೀ ಮಹಾತ್ಮೆ ಕಥಾರಂಭದಿಂದ ತೊಡಗಿ, ವಿವಿಧ ಘಟ್ಟಗಳನ್ನು ಪ್ರತ್ಯೇಕವಾಗಿಸಿಕೊಂಡು ಕಥಾಂತ್ಯದವರೆಗೆ ಈ ಮೂರು ಪ್ರಸಂಗಗಳು ಯಾವ ರೀತಿಯಾಗಿ ನಡೆಯುತ್ತವೆ ಮತ್ತು ಈ ಪ್ರಸಂಗಗಳು ಒಂದರೊಳಗೊಂದು ಬೆರೆತು, ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಯಾವ ರೀತಿಯಲ್ಲಿ ರಂಗಕ್ಕೆ ಬಳಕೆಯಾಗುತ್ತಿವೆ ಎಂಬುದನ್ನು ವಿಸ್ತೃತವಾಗಿ ಅಧ್ಯಯನ ಮಾಡಲಾಗಿದೆ.

ಶ್ರೀದೇವೀ ಮಹಾತ್ಮೆಯಲ್ಲಿ ಬರುವ ಕಥೆಗಳು ಹಲವು ಪುರಾಣಗಳಲ್ಲಿ ರಚಿತವಾಗಿದ್ದರೂ, ಸಪ್ತಶತೀ ಹಾಗೂ ಶ್ರೀಮದ್ ದೇವೀಭಾಗವತವು ದೇವಿ ಪ್ರಾಧಾನ್ಯತೆಯನ್ನು ಹೊಂದಿರುವ ಕಾರಣ ಯಕ್ಷಗಾನ ಪ್ರಸಂಗಕ್ಕೆ ಇವುಗಳನ್ನೇ ಮೂಲವೆಂದು ಹೇಳಲಾಗುತ್ತದೆ. ಆದರೆ ರಂಗಪ್ರಯೋಗದ ದೃಷ್ಟಿಯಿಂದ ಇತರ ಪುರಾಣಗಳಿಂದ ಶ್ರೀದೇವೀ ಮಹಾತ್ಮೆಗೆ ಹೊಂದಿಕೆಯಾಗುವ ಇತರ ಕಥೆಗಳನ್ನು ಬಳಸಿಕೊಂಡಿರುವುದು ಈ ಪುರಾಣಗಳ ವಿಶ್ಲೇಷಣೆಯಿಂದ ತಿಳಿದುಬರುತ್ತದೆ. ಪುರಾಣ ಕಥೆಯನ್ನು ಯಕ್ಷಗಾನದಲ್ಲಿ ಯಾವ ರೀತಿಯಾಗಿ ವಿಸ್ತರಿಸಿಕೊಳ್ಳಲಾಗಿದೆ, ಬದಲಾವಣೆಗಳು ಯಾವ ರೀತಿ ನಡೆದಿವೆ, ಹೊಸ ಕಥೆಗಳು ಹೇಗೆ ಸೇರ್ಪಡೆಗೊಂಡಿವೆ, ಪುರಾಣ ಹಾಗೂ ಪ್ರಸಂಗಗಳಲ್ಲಿ ಯಾವುದೆಲ್ಲಾ ಸಾಮ್ಯತೆಗಳಿವೆ ಎಂಬುದನ್ನು ಪುರಾಣ ಹಾಗೂ ಪ್ರಸಂಗಗಳ ತೌಲನಿಕ ಅಧ್ಯಯನದಲ್ಲಿ ವಿವರವಾಗಿ ಚರ್ಚಿಸಿ ಕೊನೆಯಲ್ಲಿ ಪುರಾಣ ಹಾಗೂ ಪ್ರಸಂಗ ಪದ್ಯಗಳ ಒಟ್ಟು ವಿಶ್ಲೇಷಣೆಯನ್ನು ಮಾಡಲಾಗಿದೆ.

ಮುಂದೆ ಈ ಪ್ರಸಂಗವನ್ನು ಸಾಹಿತ್ಯದ ಹಿನ್ನೆಲೆಯಿಂದ ಗಮನಿಸಿ ಸಾಹಿತ್ತಿಕವಾಗಿ ಪ್ರಸಂಗವು ಹೇಗೆ ಮಹತ್ವವನ್ನು ಹೊಂದಿದೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿ ವಿವರಿಸಲಾಗಿದೆ. ಈ ಪ್ರಸಂಗದಲ್ಲಿ ಬರುವಂತಹ ನವರಸಗಳ ಪ್ರಯೋಗ, ಅಲಂಕಾರಗಳು, ಭಾಷಾ ಶೈಲಿ, ಯಕ್ಷಗಾನ ಪ್ರಸಂಗಗಳಲ್ಲಿ ಸಾಮಾನ್ಯವಾಗಿ ಬಳಸುವ ಛಂದೋಬಂಧಗಳನ್ನು ಹೊರತುಪಡಿಸಿ ವಿಶೇಷವಾದ ಬಳಕೆಗಳನ್ನು ಇಲ್ಲಿ ಗುರುತಿಸಲಾಗಿದೆ.

ಅಧ್ಯಾಯ ನಾಲ್ಕು: ಶ್ರೀದೇವೀ ಮಹಾತ್ಮೆ ಪ್ರದರ್ಶನ ವಿವೇಚನೆ

ಈ ಭಾಗದಲ್ಲಿ ಶ್ರೀದೇವೀ ಮಹಾತ್ಮೆಯ ಪ್ರದರ್ಶನ ವಿವೇಚನೆಯನ್ನು ಮಾಡಿಕೊಳ್ಳಲಾಗಿದೆ. ಪ್ರಸಂಗದಲ್ಲಿ ಬರುವಂತಹ ಪಾತ್ರಗಳು, ಪ್ರದರ್ಶನವು ಬೆಳೆದು ಬಂದಿರುವ ರೀತಿಯ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಯಕ್ಷಗಾನ ಪ್ರದರ್ಶನ ಸ್ವರೂಪ, ಶ್ರೀದೇವೀ ಮಹಾತ್ಮೆ ಪಾತ್ರ

ವಿವೇಚನೆ, ಶ್ರೀದೇವೀ ಮಹಾತ್ಮೆ ಪ್ರದರ್ಶನ ವಿಶ್ಲೇಷಣೆ, ಆಚರಣೆಗಳು ಮತ್ತು ನಂಬಿಕೆಗಳು ಎಂದು ಮುಖ್ಯವಾಗಿ ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡು ಈ ಅಧ್ಯಾಯವನ್ನು ರೂಪಿಸಲಾಗಿದೆ.

ಯಕ್ಷಗಾನ ಪ್ರದರ್ಶನದ ಒಟ್ಟು ಸ್ವರೂಪದ ಕುರಿತಾಗಿ ಆರಂಭದಲ್ಲಿ ಸ್ಥೂಲವಾಗಿ ವಿವರಿಸಿ, ಮುಂದೆ ಶ್ರೀದೇವೀ ಮಹಾತ್ಮೆ ಪಾತ್ರ ವಿವೇಚನೆಯಲ್ಲಿ ಈ ಪ್ರಸಂಗದಲ್ಲಿ ಬರುವಂತಹ ಪಾತ್ರಗಳನ್ನು ಅವುಗಳು ಬರುವ ಸನ್ನಿವೇಶಗಳು, ಅವುಗಳ ಮುಖವರ್ಣಿಕೆ, ವೇಷಭೂಷಣ ಮತ್ತು ಬಳಸುವ ಆಯುಧಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನವನ್ನು ಮಾಡಲಾಗಿದೆ. ಈ ಭಾಗದಲ್ಲಿ ಕೆಲವು ಪಾತ್ರಗಳಲ್ಲಿ ಕಾಲಾಂತರದಲ್ಲಿ ನಡೆದಿರುವ ಬದಲಾವಣೆಗಳನ್ನು ಕೂಡಾ ಗುರುತಿಸಲಾಗಿದೆ.

ನಂತರ ಶ್ರೀದೇವೀ ಮಹಾತ್ಮೆಯ ಪ್ರದರ್ಶನ ವಿಶ್ಲೇಷಣೆಯನ್ನು ಮಾಡಲಾಗಿದ್ದು, ಈ ಭಾಗದಲ್ಲಿ ಪ್ರದರ್ಶನದ ಆರಂಭಿಕ ಹಂತದ ಬಗೆಗೆ ಚರ್ಚಿಸಲಾಗಿದೆ. ಕೊರಕ್ಕೋಡು ಹಾಗೂ ಕಿನ್ನಿಗೋಳಿಯಲ್ಲಿ ನಡೆದ ಶ್ರೀದೇವೀ ಮಹಾತ್ಮೆಯ ಮೊದಲ ಪ್ರದರ್ಶನಗಳು, ಆ ಸಂದರ್ಭದ ವಿವರಗಳನ್ನು ಇಲ್ಲಿ ಹೇಳಲಾಗಿದೆ. ಮೊದಲ ಪ್ರದರ್ಶನಕ್ಕೆ ಕಾರಣವಾಗಿ ಕೊರಕ್ಕೋಡಿನ ಸ್ಥಳ ಇತಿಹಾಸವನ್ನು ಇಲ್ಲಿ ಹೇಳಲಾಗಿದೆ. ಮುಂದೆ ಈ ಪ್ರಸಂಗವು ಬೆಳೆದು ಬಂದಿರುವ ರೀತಿಯ ಕುರಿತಾಗಿ ವಿವರಿಸಲಾಗಿದ್ದು, ಈ ಭಾಗದಲ್ಲಿ ಆರಂಭದ ಪ್ರದರ್ಶನದಿಂದ ತೊಡಗಿ ಇಂದಿನವರೆಗೆ ಪ್ರದರ್ಶನದಲ್ಲಿ ನಡೆದಿರುವ ಬದಲಾವಣೆಗಳು, ಈ ಪ್ರಸಂಗವನ್ನು ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗಿರುವ ಪ್ರಸಿದ್ಧಿ ಪಡೆದ ಕಲಾವಿದರ ವಿವರಗಳನ್ನು ನೀಡಲಾಗಿದೆ.

ಮುಂದೆ ಶ್ರೀದೇವೀ ಮಹಾತ್ಮೆ ಪ್ರದರ್ಶನಗಳನ್ನು ಪ್ರದರ್ಶನದ ಕಾಲ ವೈವಿಧ್ಯತೆಯ ಹಿನ್ನೆಲೆಯಿಂದ ವಿವೇಚಿಸಲಾಗಿದೆ. ಒಂಬತ್ತು, ಏಳು, ಐದು, ಮೂರು, ಎರಡು, ಒಂದು ದಿನಗಳ ಹಾಗೂ ಕಾಲಮಿತಿ, ಜೋಡಾಟ ನಡೆಯುವ ರೀತಿಯನ್ನು ಇಲ್ಲಿ ವಿವರಿಸಲಾಗಿದೆ. ಇಲ್ಲಿ ದಾಖಲೆಗೆ ಲಭಿಸಿರುವಂತಹ ಪ್ರದರ್ಶನಗಳನ್ನು ಕೂಡಾ ನೀಡಲಾಗಿದೆ. ಈ ಪ್ರಸಂಗವನ್ನೇ ಹರಕೆ ಬಯಲಾಟವಾಗಿ ಪ್ರಧಾನವಾಗಿ ಆಡುವಂತಹ ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಮಂಡಳಿಯಲ್ಲಿ ಈ ಪ್ರಸಂಗ ನಡೆದು ಬಂದಿರುವ ರೀತಿ, ಪ್ರದರ್ಶನದ ಕಾಲವಿಂಗಡಣೆ, ಪ್ರದರ್ಶನ ಸಂದರ್ಭದ ವಿಧಿವಿಧಾನಗಳು ಇತ್ಯಾದಿಗಳ ಕುರಿತು ವಿವೇಚಿಸಲಾಗಿದೆ.

ಮುಂದೆ ಪ್ರದರ್ಶನ ವೈಶಿಷ್ಟ್ಯಗಳು ಮತ್ತು ಸಾಧ್ಯತೆಗಳ ಕುರಿತು ಚರ್ಚಿಸಲಾಗಿದೆ. ವಿಶೇಷ ಪಾತ್ರಗಳಾದ ಅಷ್ಟಭುಜೆ ದೇವಿ, ಮಹಿಷಾಸುರ ಮುಂತಾದ ಪರಿಕಲ್ಪನೆಗಳ ಕುರಿತು, ಪಾತ್ರ ಕಲ್ಪನೆಗಳು, ವೈಭವದ ಪ್ರದರ್ಶನ, ವಿಶೇಷವಾದ ಪ್ರಯೋಗಗಳು ಮತ್ತು ಹೊಸ ಸಾಧ್ಯತೆಗಳ ಕುರಿತು ವಿವರಿಸಲಾಗಿದೆ. ಈ ಪ್ರಸಂಗದಲ್ಲಿ ಭೂತಾರಾಧನೆಯ ಪ್ರಭಾವವಾಗಿ ರಕ್ತೇಶ್ವರಿ ಪಾತ್ರವು ಹಾಸುಹೊಕ್ಕಾಗಿರುವ ಅಂಶವನ್ನು ಹೇಳಲಾಗಿದೆ. ಈ ಪ್ರಸಂಗದ ರಂಗಸಜ್ಜಿಕೆಯು ಕೂಡಾ ವಿಶಿಷ್ಟವಾದುದು. ಉಪರಂಗಸ್ಥಳದಂತೆ ಕಾಣುವ ಉಯ್ಯಾಲೆಯನ್ನು ಹಾಕುವ ಪ್ರತ್ಯೇಕ ಸ್ಥಳ ಮತ್ತು ಬಳಸಲಾಗುವ ಇತರ ರಂಗಪರಿಕರಗಳ ಕುರಿತು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೨೦೧೧ರಲ್ಲಿ ಬಜ್ಪೆಯಲ್ಲಿ ಮೂರು ದಿನಗಳ ಶ್ರೀದೇವೀ ಮಹಾತ್ಮೆ ಅಧ್ಯಯನ ಶಿಬಿರ ನಡೆದಿದ್ದು, ಇದು ಈ ಅಧ್ಯಯನಕ್ಕೆ ಪೂರಕವಾಗಿ ಲಭಿಸಿದಂತಹ ಪ್ರಮುಖ ಮಾಹಿತಿಯಾಗಿದೆ. ಕಲಾವಿದರು ಮತ್ತು ವಿದ್ವಾಂಸರನ್ನು ಒಳಗೊಂಡು ನಡೆದಿರುವ ಶಿಬಿರದಲ್ಲಿ ಮಂಡಿಸಿದಂತಹ ಅಭಿಪ್ರಾಯಗಳು, ನಿರ್ಣಯಗಳ ಕುರಿತು ಮಾಹಿತಿ ಸಂಗ್ರಹವನ್ನು ಮಾಡಿ ಅಧ್ಯಯನಕ್ಕೊಳಪಡಿಸಲಾಗಿದೆ. ಈ ಶಿಬಿರದಲ್ಲಿ ಮೂರು ದಿನಗಳ ಕಾಲ ಶ್ರೀದೇವೀ ಮಹಾತ್ಮೆ ಪ್ರಸಂಗವನ್ನು ಮಧುಕೈಟಭರ ವಧೆ, ಮಹಿಷಾಸುರ ವಧೆ, ಶುಂಭನ ಒಡ್ಡೋಲಗ, ಶುಂಭವಧೆ ಹೀಗೆ ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡು ಪ್ರದರ್ಶನವನ್ನು ಮಾಡಿ ನಂತರ ಪ್ರತೀ ಕಥಾಭಾಗದ ಕುರಿತು ವಿವರವಾದ ಚರ್ಚೆಗಳು ನಡೆದು, ಮುಂದಿನ ದಿನಗಳಲ್ಲಿ ಯಾವ ರೀತಿಯಾಗಿ ಚೊಕ್ಕವಾದ ಪ್ರದರ್ಶನವನ್ನು ನೀಡಬಹುದೆಂಬ ಕುರಿತು ವಿದ್ವಾಂಸರು ಹಾಗೂ ಕಲಾವಿದರ ನಡುವೆ ಸಂವಾದಗಳು ಏರ್ಪಟ್ಟವು. ಕೊನೆಯ ದಿನ ಮೂರೂ ದಿನಗಳ ಅಭಿಪ್ರಾಯ ಸಾರವನ್ನು ಅಳವಡಿಸಿಕೊಂಡು ಪ್ರದರ್ಶನವು ಕೂಡಾ ನಡೆದಿರುವುದು ಉಲ್ಲೇಖನೀಯ. ಈ ಅಧ್ಯಯನ ಶಿಬಿರದ ಕುರಿತು ಇದುವರೆಗೆ ಯಾವುದೇ ಅಧ್ಯಯನಗಳು ನಡೆದಿಲ್ಲವಾಗಿದ್ದು, ಮೊದಲ ಬಾರಿಗೆ ಇಲ್ಲಿ ಅಭ್ಯಸಿಸಲಾಗಿದೆ. ಇದಲ್ಲದೆ ಯಕ್ಷಗಾನದ ಈ ಪ್ರಸಂಗವನ್ನು ಕನ್ನಡ ಮಾತ್ರವಲ್ಲದೆ ತುಳು, ಹಿಂದಿ, ಇಂಗ್ಲಿಷ್, ಮಲೆಯಾಳ, ಕೊಂಕಣಿ ಮುಂತಾದ ಭಾಷೆಗಳಲ್ಲಿ ಪ್ರಯೋಗಗಳಾಗಿರುವದನ್ನೂ ಹೇಳಲಾಗಿದೆ. ಅಲ್ಲದೆ ಬಡಗುತಿಟ್ಟು, ಮೂಡಲಪಾಯ, ಗೊಂಬೆಯಾಟ, ನಾಟಕ ಮುಂತಾದ ಪ್ರಕಾರಗಳಲ್ಲಿ ಯಾವ ರೀತಿ ಬಳಸಿಕೊಳ್ಳಲಾಗಿದೆ ಎಂಬ ಕುರಿತು ಕೂಡಾ ಅಧ್ಯಯನವನ್ನು ನಡೆಸಲಾಗಿದೆ. ಇದರೊಂದಿಗೆ ಈ ಪ್ರಸಂಗದಲ್ಲಿ ನಡೆದಿರುವ ವಿಶೇಷ ಪ್ರಯೋಗಗಳನ್ನು ಗುರುತಿಸಿ ವಿವರಣೆಗಳನ್ನು ನೀಡಲಾಗಿದೆ.

ಶ್ರೀದೇವೀ ಮಹಾತ್ಮೆಯು ಕೇವಲ ಒಂದು ಯಕ್ಷಗಾನ ಪ್ರಸಂಗವಾಗದೆ, ಆರಾಧನಾ ಮಹತ್ವವನ್ನು ಒಡಗೂಡಿಸಿಕೊಂಡು ಬೆಳೆದು ಬಂದಿರುವಂತಹ ಪ್ರಸಂಗ. ಈ ಪ್ರಸಂಗವು ಇಷ್ಟೊಂದು ಪ್ರಯೋಗಕ್ಕೆ ಒಳಪಡುವುದಕ್ಕೆ ಹರಕೆ ಬಯಲಾಟಗಳೇ ಮೂಲ ಕಾರಣ. ಆದುದರಿಂದ ಈ ಪ್ರಸಂಗವು ಒಳಗೊಂಡಿರುವ ಆಚರಣೆಗಳು ಮತ್ತು ನಂಬಿಕೆಗಳ ಕುರಿತು ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ. ಆರಂಭಿಕ ಹಂತದಲ್ಲಿ ಈ ಪ್ರಸಂಗವನ್ನು ಪ್ರದರ್ಶಿಸಲು ಕಲಾವಿದರು ಹಾಗೂ ಸೇವಾಕರ್ತರು ಭಯಪಡುತ್ತಿದ್ದರು. ಇಂತಹ ಒಂದು ಪ್ರಸಂಗ ಇಂದು ಅತಿಹೆಚ್ಚು ಪ್ರದರ್ಶನಗೊಳ್ಳಲು ಈ ಪ್ರಸಂಗವು ಒಳಗೊಂಡಿರುವಂತಹ ಆರಾಧನಾ ಮಹತ್ವವನ್ನು, ಪ್ರದರ್ಶನ ಸಂದರ್ಭದಲ್ಲಿ ನಡೆಯುವಂತಹ ತಾಂತ್ರಿಕ ಕ್ರಿಯೆಗಳನ್ನು, ಫಲಾನುಭವಿಗಳ ಉದಾಹರಣೆಗಳನ್ನು ಕೂಡಾ ಬಳಸಿಕೊಂಡು ವಿವರವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಸಮಾರೋಪದಲ್ಲಿ ಅಧ್ಯಯನ ಫಲಿತಗಳನ್ನು ದಾಖಲಿಸಲಾಗಿದೆ.

ಅಧ್ಯಯನ ಫಲಿತಗಳು

ಶ್ರೀದೇವೀ ಮಹಾತ್ಮೆ ಯಕ್ಷಗಾನ ರಂಗದ ಅತ್ಯಂತ ಜನಪ್ರಿಯ ಪ್ರಸಂಗ. ವರ್ಷವೊಂದರಲ್ಲಿ ೧೫೦೦ಕ್ಕೂ ಮಿಕ್ಕಿ ಪ್ರದರ್ಶನಗಳು ನಡೆಯುತ್ತಿರುವುದನ್ನು ಗಮನಿಸಿದಾಗ ಯಕ್ಷಗಾನ ಕ್ಷೇತ್ರಕ್ಕೆ ಈ ಪ್ರಸಂಗವು ತನ್ನದೇ ಆದ ಅಮೂಲ್ಯ ಕೊಡುಗೆಯನ್ನು ನೀಡುತ್ತಾ ಬಂದಿರುವುದನ್ನು ಗುರುತಿಸಲೇ ಬೇಕಾಗುತ್ತದೆ. ವೈವಿಧ್ಯಮಯ ಪಾತ್ರ, ಕಥಾವಿನ್ಯಾಸದೊಂದಿಗೆ ಆರಾಧನಾ ಮೌಲ್ಯವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಈ ಪ್ರಸಂಗದ ಬೇಡಿಕೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಶ್ರೀದೇವೀ ಮಹಾತ್ಮೆ ಯಕ್ಷಗಾನ ಪ್ರಸಂಗವನ್ನು ಅಧ್ಯಯನಕ್ಕೆ ಒಳಪಡಿಸಿ ದೊರಕಿದಂತಹ ಫಲಿತಗಳನ್ನು ಮುಂದೆ ನೀಡಲಾಗಿದೆ.

- ಪುರಾಣಗಳಲ್ಲಿ ಶ್ರೀದೇವೀ ಮಹಾತ್ಮೆ ಕಥೆಯ ಮೂಲವನ್ನು ಪರಿಶೀಲನೆಗೆ ಒಳಪಡಿಸುವಾಗ, ಸಪ್ತಶತೀ ಹಾಗೂ ಶ್ರೀಮದ್ ದೇವೀ ಭಾಗವತದಲ್ಲಿ ಈ ಕಥೆ ಮೊದಲು ಸಿಗುತ್ತದೆ. ಆದರೆ ಇತರ ಹಲವು ಪುರಾಣಗಳೂ ಶ್ರೀದೇವೀ ಮಹಾತ್ಮೆ ಕಥೆಯನ್ನು ಒಳಗೊಂಡಿರುವುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.
- ಶ್ರೀದೇವೀ ಮಹಾತ್ಮೆ ಪ್ರಸಂಗಕ್ಕೆ ಆಕರವಾಗಿ ಸಂಸ್ಕೃತ ಪುರಾಣಗಳು, ಕನ್ನಡ ಹಾಗೂ ತುಳು ಕಾವ್ಯಗಳನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ.

- ಸಂಸ್ಕೃತದಲ್ಲಿ ಬಂದಿರುವ ಮಾರ್ಕಂಡೇಯ ಪುರಾಣ, ಶ್ರೀಮದ್ ದೇವೀಭಾಗವತ, ಶಿವಪುರಾಣಂ, ಶ್ರೀತ್ರಿಪುರಾರಹಸ್ಯ, ಶ್ರೀಕಾಲಿಕಾಪುರಾಣ, ಶ್ರೀಮನ್ಮಹಾಭಾರತ, ಶ್ರೀ ಲಿಂಗಮಹಾಪುರಾಣಂ, ಶ್ರೀವಿಷ್ಣುಧರ್ಮೋತ್ತರ ಮಹಾಪುರಾಣಂ, ಶ್ರೀಸ್ಕಾಂದಮಹಾಪುರಾಣಂ, ಶ್ರೀ ಗಣೇಶಪುರಾಣಂ, ಶ್ರೀ ಸೌರಪುರಾಣಂ, ಶ್ರೀ ವಾಮನಪುರಾಣ, ಕೂರ್ಮ ಪುರಾಣಂ, ಬ್ರಹ್ಮವೈವರ್ತಮಹಾಪುರಾಣಂ, ನರಸಿಂಹ ಪುರಾಣಮ್, ಶ್ರೀ ವರಾಹಪುರಾಣಂ, ಭವಿಷ್ಯಪುರಾಣ, ಶ್ರೀಮದ್ವಾಯುಪುರಾಣ, ಶ್ರೀಮತ್ಸ್ಯಮಹಾಪುರಾಣಂ, ನಾರದೀಯ ಮಹಾಪುರಾಣ, ಪದ್ಮಮಹಾಪುರಾಣಂ ಮೊದಲಾದ ಪುರಾಣಗಳಲ್ಲಿ ಶ್ರೀದೇವೀ ಮಹಾತ್ಮೆ ಕಥೆಯು ಬಂದಿದೆ. ಆಯಾ ಪುರಾಣಗಳಿಗೆ ಅನುಗುಣವಾಗಿ ಭಿನ್ನವಾಗಿ ಚಿತ್ರಿತವಾಗಿದೆ.
- ಕನ್ನಡ ಕಾವ್ಯಗಳಾದ ಚಿದಾನಂದಾವಧೂತ ವಿರಚಿತ ಶ್ರೀದೇವೀ ಮಹಾತ್ಮೆ, ವಚನ ದೇವೀ ಮಹಾತ್ಮೆ, ಮಾರ್ಕಂಡೇಯ ಪುರಾಣಾಂತರ್ಗತ ಶ್ರೀದೇವೀ ಮಹಾತ್ಮೆ (ಭಾಮಿನಿ ಷಟ್ಪದಿ), ಶ್ರೀ ದೇವೀ ಮಹಾತ್ಮೆ (ಭಾಮಿನಿ ಷಟ್ಪದಿ), ಕನ್ನಡ ದೇವೀ ಮಹಾತ್ಮೆ (ವಾರ್ಧಕ ಷಟ್ಪದಿ), ಪೊಳಲಿ ಶಾಸ್ತ್ರಿ ವಿರಚಿತ ಶ್ರೀ ದೇವೀ ಮಹಾತ್ಮ್ಯ, ಶ್ರೀ ದೇವೀ ಮಹಾತ್ಮ್ಯೆಯ ದಿವ್ಯಕಥೆ, ದೇವೀ ಮಹಾತ್ಮೆ ಮತ್ತು ತುಳು ಕಾವ್ಯಗಳಾದ ತುಳು ದೇವೀಮಹಾತ್ಮೆ, ದೇವಿನ ದಿವ್ಯ ಕತೆಕುಲು, ತುಳುಭಾಷೆಡ್ ಶ್ರೀ ದೇವೀ ಮಹಾತ್ಮೆ ಇವುಗಳಲ್ಲಿ ಶ್ರೀದೇವೀ ಮಹಾತ್ಮೆ ಕಥೆ ಚಿತ್ರಿತವಾಗಿರುವ ರೀತಿಯನ್ನು ವಿವರಿಸುವ ಮೂಲಕ ಈ ಕಥೆಗೆ ಕನ್ನಡ ಹಾಗೂ ಸಂಸ್ಕೃತ ಮೂಲಗಳ ದಟ್ಟವಾದ ಪ್ರಭಾವ ಆಗಿರುವುದನ್ನು ಅಧ್ಯಯನದ ಮೂಲಕ ಖಚಿತಪಡಿಸಲಾಗಿದೆ. ಸಂಸ್ಕೃತ ಕಾವ್ಯಗಳು ಕನ್ನಡ ಕಾವ್ಯ ರಚನೆಗೆ ಪ್ರೇರಕವಾದುದನ್ನು ಈ ಎರಡೂ ಭಾಷೆಗಳಲ್ಲಿ ಬಂದಿರುವ ಶ್ರೀದೇವೀ ಮಹಾತ್ಮೆಯ ಕತೆ ಯಕ್ಷಗಾನದ ಶ್ರೀದೇವೀ ಮಹಾತ್ಮೆ ಪ್ರಸಂಗಕ್ಕೆ ಮೂಲ ಎಂಬುದನ್ನು ಗುರುತಿಸಲಾಗಿದೆ.
- ಯಕ್ಷಗಾನ ಪ್ರಸಂಗಕ್ಕೆ ಸಪ್ತಶತೀ ಹಾಗೂ ಶ್ರೀಮದ್ ದೇವೀಭಾಗವತವು ಮೂಲ ಕಥೆ ಪ್ರೇರಣೆಯನ್ನು ಒದಗಿಸಿದೆ. ಆದರೆ ಕನ್ನಡದ ಚಿದಾನಂದಾವಧೂತರ ಶ್ರೀದೇವಿಮಹಾತ್ಮೆಯು ಯಕ್ಷಗಾನ ಪ್ರಸಂಗ ರಚನೆಗೆ ಮೂಲಪಠ್ಯವಾಗಿ ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.
- ಶ್ರೀದೇವೀ ಮಹಾತ್ಮೆ ಯಕ್ಷಗಾನ ಪ್ರಸಂಗದಲ್ಲಿ ಸಂಸ್ಕೃತದ ಮಾರ್ಕಂಡೇಯ ಪುರಾಣ ಹಾಗೂ ಶ್ರೀಮದ್ ದೇವೀಭಾಗವತ ಪುರಾಣಗಳಲ್ಲಿ ಇಲ್ಲದೇ ಇರುವಂತಹ ಆರಂಭದ

ತ್ರಿಮೂರ್ತಿಗಳ ಸಂಭಾಷಣೆ ಮತ್ತು ಉದರಶೋಧನೆಯು ಶ್ರೀ ಲಿಂಗಮಹಾಪುರಾಣಂ, ಶ್ರೀ ಸೌರಪುರಾಣ, ಕೂರ್ಮಪುರಾಣಂ, ಶ್ರೀಮದ್ವಾಯುಪುರಾಣ, ಬ್ರಹ್ಮವೈವರ್ತಮಹಾಪುರಾಣ, ಭವಿಷ್ಯಪುರಾಣ ಮುಂತಾದ ಪುರಾಣಗಳಲ್ಲಿ ಕಂಡುಬರುತ್ತದೆ. ಆದರೆ ಕ್ರಮವಾಗಿ ಮೊದಲ ನಾಲ್ಕು ಪುರಾಣಗಳಲ್ಲಿ ಈ ವಾದದಲ್ಲಿ ಕೊನೆಗೆ ಶಿವನೇ ಶ್ರೇಷ್ಠನೆಂದು ಒಮ್ಮತಕ್ಕೆ ಬರಲಾಗುತ್ತದೆ, ನಂತರದ ಪುರಾಣದಲ್ಲಿ ವಿಷ್ಣು ಹಾಗೂ ಕೊನೆಯ ಪುರಾಣದಲ್ಲಿ ಸೂರ್ಯನ ಪ್ರಾಧಾನ್ಯತೆಯನ್ನು ಎತ್ತಿ ಹಿಡಿಯಲಾಗಿದೆ. ಯಕ್ಷಗಾನ ಪ್ರಸಂಗದಲ್ಲಿ ವಿಷ್ಣುವೇ ಶ್ರೇಷ್ಠನೆಂದು ಒಪ್ಪಿಕೊಳ್ಳಲಾಗುತ್ತದೆ. ಈ ಅಂಶವು ಶೈವ-ವೈಷ್ಣವ ಚಿಂತನೆಗಳ ಸಂಘರ್ಷವನ್ನು ಸೂಚಿಸುವುದಲ್ಲದೇ, ಯಕ್ಷಗಾನ ವೈಷ್ಣವ ಚಿಂತನೆಗಳ ಪರವಾಗಿರುವುದನ್ನು ಗುರುತಿಸಲಾಗಿದೆ.

- ಶ್ರೀ ಲಿಂಗಪುರಾಣದಲ್ಲಿ ಬ್ರಹ್ಮನಿಗೆ ಹಿರಣ್ಯಗರ್ಭನೆಂಬ ಹೆಸರು ಉಲ್ಲೇಖವಿರುವುದನ್ನು ಗುರುತಿಸಲಾಗಿದೆ. ಪ್ರಸಂಗದಲ್ಲಿ ಈ ಕಲ್ಪನೆಯನ್ನು ಸ್ವಾರಸ್ಯಪೂರ್ಣವಾಗಿ ವಿಸ್ತರಿಸಿರುವುದನ್ನು ಗಮನಿಸಲಾಗಿದೆ.

- ವಿಷ್ಣುವಿಗೆ ಅಧೋಕ್ಷಜನೆಂಬ ಹೆಸರು ಹಾಗೂ ವಿಷ್ಣುವು ಬಾಲಮುಕುಂದನಾಗಿ ಆಲದೆಲೆಯ ಮೇಲೆ ಪವಡಿಸುತ್ತಾನೆ ಎಂಬ ಪರಿಕಲ್ಪನೆ ಪುರಾಣಗಳಲ್ಲಿ ಇಲ್ಲದೇ ಇರುವುದನ್ನು ಗುರುತಿಸಲಾಗಿದೆ. ಉದರಪರಿಶೋಧನೆಯ ಸಂದರ್ಭದಲ್ಲಿ ವಿಷ್ಣುವು ಬ್ರಹ್ಮನ ಅಧೋದ್ವಾರದಿಂದ ಬಂದುದರಿಂದ ಅಧೋಕ್ಷಜ ಎಂಬ ಹೆಸರು ಬಂದಿರುವುದಾಗಿ ಚಿದಾನಂದಾವಧೂತ ವಿರಚಿತ ಶ್ರೀದೇವೀ ಮಹಾತ್ಮೆಯಲ್ಲಿ ಮಾತ್ರವೇ ಉಲ್ಲೇಖವಿದೆ.

- ಮಾರ್ಕಂಡೇಯ ಪುರಾಣವೂ ಸೇರಿದಂತೆ ಶ್ರೀದೇವೀ ಮಹಾತ್ಮೆ ಕಥೆಯ ಆರಂಭ ಹೆಚ್ಚಿನ ಎಲ್ಲಾ ಪುರಾಣಗಳಲ್ಲೂ ಮಧು ಕೈಟಭರ ವಧೆಯಿಂದಲೇ ಆರಂಭವಾಗುತ್ತದೆ. ಯಕ್ಷಗಾನ ಪ್ರಸಂಗದ ಮಧು ಕೈಟಭರ ವಧಾ ಪ್ರಸಂಗವು ಮಾರ್ಕಂಡೇಯ ಪುರಾಣದಲ್ಲಿ ಬರುವಂತೆಯೇ ಇದೆ. ಶ್ರೀ ವಿಷ್ಣುಧರ್ಮೋತ್ತರ ಪುರಾಣದಲ್ಲಿ ಮಧು ಕೈಟಭರ ಕಥೆ ಬೇರೆ ರೀತಿ ನಿರೂಪಿತವಾಗಿದ್ದರೂ, ಅವರ ಮೇಧಸ್ಸಿನಿಂದ ಮೇಧಿನಿ ನಿರ್ಮಾಣವಾಯಿತೆಂಬ ಉಲ್ಲೇಖವಿದೆ. ಮೇಧಿನಿ ನಿರ್ಮಾಣದ ಉಲ್ಲೇಖ ಶ್ರೀಮದ್‌ದೇವೀ ಭಾಗವತದಲ್ಲೂ ಇರುವುದನ್ನು ಗುರುತಿಸಲಾಗಿದೆ.

- ಪುರಾಣದಲ್ಲಿ ಎಲ್ಲಿಯೂ ವಿದ್ಯುನ್ಮಾಲಿಯ ಪ್ರಸಂಗ, ಮಾಲಿನಿಯ ತಪಸ್ಸು, ಶಾಪ, ದಿತಿಯ ಮಗಳು ಮಾಲಿನಿ ಎಂಬ ಹೆಸರಿನಾಕೆಯ ಮದುವೆ ವಿಚಾರ ಬಂದಿಲ್ಲ.

ಯಕ್ಷಗಾನ ಪ್ರಸಂಗದಲ್ಲಿ ಮಾಲಿನಿ–ವಿದ್ಯುನ್ಮಾಲಿಯ ಮದುವೆ ಪ್ರಸಂಗ ರಂಜನೆಗಾಗಿ ಕಾಲ್ಪನಿಕವಾಗಿ ಸೇರಿಸಿಕೊಂಡ ಕಥಾ ಭಾಗವೆಂದು ತಿಳಿದುಕೊಳ್ಳಲಾಗಿದೆ. ಹೀಗೆ ಯಕ್ಷಗಾನ ಕವಿಗಳು ತಮ್ಮ ಸ್ವಂತಿಕೆಯನ್ನು ಪ್ರಸಂಗ ರಚನೆಯಲ್ಲಿ ತಂದಿರುವುದನ್ನು ಗುರುತಿಸಲಾಗಿದೆ.

- ಯಕ್ಷಗಾನದಲ್ಲಿ ದೇವಿಯನ್ನು ಅಷ್ಟಭುಜೆ ಎಂದು ಚಿತ್ರಿಸಲಾಗಿದ್ದು, ಸಪ್ತಶತಿಯಲ್ಲಿ ಸಾವಿರ ಕೈಗಳು ಮತ್ತು ಶ್ರೀಮದ್ ದೇವೀಭಾಗವತದಲ್ಲಿ ದೇವಿಗೆ ಹದಿನೆಂಟು ಕೈಗಳೆಂದು ಹೇಳಲಾಗಿದೆ. ಶ್ರೀ ವರಾಹಪುರಾಣಂನಲ್ಲಿ ನೇತ್ರಾಸುರನೆಂಬ ರಾಕ್ಷಸನನ್ನು ವಧಿಸಲು ಅಷ್ಟಭುಜೆ ದುರ್ಗಿಯು ಬರುವುದನ್ನು ಗಮನಿಸಿದಾಗ ಪುರಾಣದಲ್ಲಿಯೂ ದೇವಿಗೆ ಅಷ್ಟಭುಜದ ಪರಿಕಲ್ಪನೆ ಇರುವುದನ್ನು ಗುರುತಿಸಲಾಗಿದೆ.
- ಮಹಿಷ ವಧೆಗಾಗಿ ದೇವಿಗೆ ವಾಹನವಾಗಿ ಪರ್ವತರಾಜನೇ ಸಿಂಹ ರೂಪದಲ್ಲಿ ಬರುತ್ತಾನೆ ಎಂದು ಯಕ್ಷಗಾನದಲ್ಲಿ ಹೇಳಲಾಗುತ್ತದೆ. ಆದರೆ ಈ ಉಲ್ಲೇಖ ಪುರಾಣದಲ್ಲಿ ಲಭ್ಯವಿಲ್ಲ. ಶ್ರೀತ್ರಿಪುರಾ ರಹಸ್ಯದಲ್ಲಿ ವಿಷ್ಣುವೇ ಸಿಂಹವಾಗಿ ಬರುತ್ತಾನೆ ಎಂದಿರುವುದನ್ನು ಗುರುತಿಸಲಾಗಿದೆ.
- ಶುಂಭವಧೆಗಾಗಿ ಅವತಾರವೆತ್ತುವ ದೇವಿಯು ಪುರಾಣಗಳಲ್ಲಿ ಪಾರ್ವತಿಯ ಅವತಾರವೆಂದು ಹೇಳಲಾಗಿದ್ದು, ಯಕ್ಷಗಾನದಲ್ಲಿ ಈ ರೀತಿಯ ಪರಿಕಲ್ಪನೆ ಇಲ್ಲ. ಬಹುಶಃ ಇದು ಯಕ್ಷಗಾನದಲ್ಲಿರುವ ವೈಷ್ಣವ ಪ್ರಾಬಲ್ಯದ ಪ್ರಭಾವದಿಂದ ಬಂದಿರಬಹುದು.
- ಯಕ್ಷಗಾನ ಪ್ರಸಂಗದಲ್ಲಿರುವಂತೆ ಚಂಡಮುಂಡರ ಪ್ರಸಂಗ ಹಾಗೂ ರಕ್ತಬೀಜನ ಪ್ರಸಂಗ ಪುರಾಣಗಳಲ್ಲಿ ದೀರ್ಘವಾಗಿ ಇಲ್ಲದೇ ಇರುವುದನ್ನು ಗುರುತಿಸಲಾಗಿದೆ. ಯಕ್ಷಗಾನದಲ್ಲಿ ರಕ್ತಬೀಜನನ್ನು ಹಾಗೂ ಸುಗ್ರೀವನನ್ನು ದೇವೀ ಭಕ್ತನಂತೆ ಚಿತ್ರಿಸುವ ರೀತಿ ಪುರಾಣದಲ್ಲಿ ಇಲ್ಲದೇ ಇರುವುದನ್ನು ಗಮನಿಸಲಾಗಿದೆ.
